بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللهُ بِبَدْرٍ وَّاَنْتُمْ اَذِلَّةٌ

ವರ್ಷ: 05

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 14

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**04 ಏಪ್ರಿಲ್ 2024, 04 ಶಹಾದತ್ 1403 ಹಿಜರಿ ಶಮ್‌ಸಿ,**
**24 ರಮಝಾನ್ 1445 ಹಿಜರಿ ಖಮರಿ.**

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

فَمَنْ كَانَ مِنْكُمْ مَّرِيْضًا اَوْ عَلٰى سَفَرٍ فَعِدَّةٌ مِّنْ اَيَّامٍ اُخَرَ وَعَلَى الَّذِيْنَ يُطِيْقُوْنَهٗ فِدْيَةٌ طَعَامُ مِسْكِيْنٍ (سورة البقرة آيت 185)

**(ಅಲ್-ಬಖರ: 185)**

**ಅಂದರೆ: (ಈ ಉಪವಾಸವನ್ನು) ಕೆಲವು ನಿರ್ದಿಷ್ಟ ದಿನಗಳಲ್ಲಿ ಅನುಷ್ಠಿಸಬೇಕಾಗಿದೆ. ಆದರೆ ನಿಮ್ಮಲ್ಲಿ ಯಾರಾದರೂ ರೋಗಿ ಅಥವಾ ಯಾತ್ರಿಕನಾಗಿದ್ದರೆ ಬೇರೆ ದಿನಗಳಲ್ಲಿ ಸಂಖ್ಯೆಯನ್ನು ಪೂರ್ಣಗೊಳಿಸಲಿ. (ಉಪವಾಸ ಮಾಡಲು ದೈಹಿಕ ನಿಶ್ಶಕ್ತಿಯಿದ್ದು ಆರ್ಥಿಕವಾಗಿ) ಸಮರ್ಥರಿದ್ದರೆ ಅವರು ಪ್ರಾಯಶ್ಚಿತ್ತವಾಗಿ ಒಬ್ಬ ನಿರ್ಗತಿಕನಿಗೆ ಆಹಾರವನ್ನು ನೀಡಬೇಕಾಗಿದೆ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಉಪವಾಸಕ್ಕೆ ಸುಳ್ಳು ಹಾನಿಕಾರಕ ವಿಷವಾಗಿದೆ

**(1903)** ಹರ್ಝ್‌ರತ್ ಅಬುಹುರೈರಾ(ರ) ಅವರು ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಹೇಳಿದರು: ಒಬ್ಬ ವ್ಯಕ್ತಿ ಸುಳ್ಳು ಹೇಳುವುದನ್ನು ಮತ್ತು ಸುಳ್ಳನ್ನು ಅಭ್ಯಾಸ ಮಾಡುವುದನ್ನು ನಿಲ್ಲಿಸದಿದ್ದರೆ, ಅಂತಹ ವ್ಯಕ್ತಿಯು ಅಲ್ಲಾಹನಿಗೋಸ್ಕರ ತಿನ್ನುವುದು ಮತ್ತು ಕುಡಿಯುವುದನ್ನು ನಿಲ್ಲಿಸುವ ಅಗತ್ಯವಿಲ್ಲ.

### ಉಪವಾಸಿಗನಿಗೆ ಅಗತ್ಯವಾದ ಸೂಚನೆಗಳು

**(1904)** ಹರ್ಝ್‌ರತ್ ಅಬುಹುರೈರಾ(ರ) ಅವರು ವರದಿ ಮಾಡುತ್ತಾರೆ ರಸೂಲುಲ್ಲಾಹ್(ಸ) ಹೇಳಿದರು: ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: (ಇಬ್ನೆ ಆದಮ್‌ನ) ಮನುಷ್ಯನ ಪ್ರತಿಯೊಂದು ಕ್ರಿಯೆಯು ಅವನಿಗಾಗಿ ಆಗಿದೆ. ಆದರೆ ಉಪವಾಸವನ್ನು ಹೊರತುಪಡಿಸಿ, ಏಕೆಂದರೆ ಅದು ನನಗಾಗಿದೆ ನಾನು ಅದರ ಪ್ರತಿಫಲವಾಗಿದ್ದೇನೆ ಮತ್ತು ಉಪವಾಸವು ಗುರಾಣಿಯಾಗಿದೆ ಮತ್ತು ನಿಮ್ಮಲ್ಲಿ ಯಾರಾದರೂ ಉಪವಾಸವನ್ನು ಅನುಷ್ಠಿಸಿದರೆ, ಅವನು ಅಶ್ಲೀಲವಾಗಿ ಮಾತನಾಡಬಾರದು ಅಥವಾ ಯಾವುದೇ ಗಲಾಟೆ ಮಾಡಬಾರದು ಮತ್ತು ಯಾರಾದರೂ ಅವನನ್ನು ನಿಂದಿಸಿದರೆ ಅಥವಾ ಜಗಳವಾಡಿದರೆ, ಅವನು ಹೇಳಬೇಕು: ನಾನು ಉಪವಾಸ ಮಾಡುವವನಾಗಿದ್ದೇನೆ. ಮತ್ತು ಮುಹಮ್ಮದ್(ಸ)ರ ಆತ್ಮ ಯಾರ ಕೈಯಲ್ಲಿದೆಯೋ ಅವನ ಆಣೆ! ಖಂಡಿತವಾಗಿಯೂ ಉಪವಾಸಿಗನ ಬಾಯಿಯ ವಾಸನೆಯು ಅಲ್ಲಾಹನಿಗೆ ಕಸ್ತೂರಿಯ ವಾಸನೆಗಿಂತ ಹೆಚ್ಚು ಇಷ್ಟವಾಗುತ್ತದೆ. ಉಪವಾಸ ಮಾಡುವವನಿಗೆ ಎರಡು ಸಂತೋಷಗಳು ಅವನನ್ನು ಸಂತೋಷಪಡಿಸುತ್ತವೆ. ಮೊದಲನೆಯ ಸಂತೋಷವೆಂದರೆ ಅವನು ಇಫ್ತಾರ್ (ಉಪವಾಸವನ್ನು ಮುರಿಯುವ ಸಮಯ) ಮಾಡುವಾಗ ಆಗುತ್ತದೆ ಮತ್ತು ಎರಡನೆಯದು ಅವನು ತನ್ನ ಸೃಷ್ಟಿಕರ್ತನನ್ನು ಭೇಟಿಯಾದಾಗ ಅವನು ತನ್ನ ಉಪವಾಸದ ಕಾರಣದಿಂದಾಗಿ ಸಂತೋಷ ಪಡುತ್ತಾನೆ.

**(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಸ್ಸೌಮ್, 2008 ಖಾದಿಯಾನ್‌ನಲ್ಲಿ ಪ್ರಕಟಿತ)**

**ಮನುಷ್ಯನು ತನ್ನ ಮೇಲೆ ಕರುಣೆ ತೋರದೆ, ಅಲ್ಲಾಹನು ಆತನ ಮೇಲೆ ಕರುಣೆದೋರುವಂತೆ ವರ್ತಿಸುವುದು ಕಡ್ಡಾಯವಾಗಿದೆ.**
**ಏಕೆಂದರೆ ಮನುಷ್ಯನಿಗೆ ತನ್ನ ಮೇಲಿನ ಅನುಕಂಪವು ನರಕವಾಗಿದೆ ಮತ್ತು ಅಲ್ಲಾಹನ ಕರುಣೆಯು ಸ್ವರ್ಗವಾಗಿದೆ**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಇದೊಂದು ಸೂಕ್ಷ್ಮ ವಿಷಯವಾಗಿದೆ ಓರ್ವ ವ್ಯಕ್ತಿಯು (ಅವನ ಸೋಮಾರಿತನದಿಂದಾಗಿ) ಉಪವಾಸವು ಕಠಿಣವಾಗಿದ್ದರೆ ಮತ್ತು ಅವನು ತನ್ನ ಮನಸ್ಸಿನಲ್ಲಿ ನಾನು ಅನಾರೋಗ್ಯದಿಂದ ಬಳಲುತ್ತಿದ್ದೇನೆ, ನಾನು ಒಂದು ಸಮಯದಲ್ಲಿ ತಿನ್ನದಿದ್ದರೆ ನನ್ನ ಆರೋಗ್ಯದಲ್ಲಿ ತೊಂದರೆಗಳನ್ನು ಉಂಟಾಗಬಹುದು ಎಂದು ಭಾವಿಸಿದರೆ ಅಂತಹ ವ್ಯಕ್ತಿಯು ಅಲ್ಲಾಹನ ಅನುಗ್ರಹವನ್ನು ಸ್ವತಃ ತನ್ನ ಮೇಲೆ ಕಠಿಣವಾಗಿರಿಸುವವನು. ಅವನು ಹೇಗೆ ಅಲ್ಲಾಹನ ಅನುಗ್ರಹವನ್ನು ಪಡೆಯುತ್ತಾನೆ. ಹಾಂ! ಯಾರು ತನ್ನ ಮನಸ್ಸಿನಲ್ಲಿ ರಮಝಾನ್‌ನ ಆಗಮನದ ಕುರಿತು ಸಂತೋಷಗೊಳ್ಳುತ್ತಾನೊ ಆತನು ರಮಝಾನ್‌ನ ಪವಿತ್ರ ಮಾಸ ಯಾವಾಗ ಬರುವುದೊ, ಯಾವಾಗ ಉಪವಾಸಗಳನ್ನು ಅನುಷ್ಠಿಸುವುದೊ ಮತ್ತು ಆತನು ತನ್ನ ಅನಾರೋಗ್ಯದಿಂದಾಗಿ ಉಪವಾಸಗಳನ್ನು ಅನುಷ್ಠಿಸದಿದ್ದರೆ ಆತನ ಆಕಾಶದಲ್ಲಿ ಉಪವಾಸಗಳಿಂದ ವಂಚಿತನಾಗಿರುವುದಿಲ್ಲ. ಈ ಲೋಕದಲ್ಲಿ ಅನೇಕ ಜನರು ನೆಪಗಳನ್ನು ಮಾಡುವವರಾಗಿದ್ದರೆ ಅವರು ಯೋಚಿಸುವುದೇನೆಂದರೆ ನಾವು ಹೇಗೆ ಲೋಕದ ಜನರನ್ನು ಮೋಸಗೊಳಿಸುತ್ತೇವೊ ಹಾಗೆಯೇ ಅಲ್ಲಾಹನ್ನು ಸಹ ಮೊಸಗೊಳಿಸುತ್ತೇವೆ. ನೆಪ ಮಾಡುವವರು ತಮ್ಮ ಕಡೆಯಿಂದಲೇ ಅನೇಕ ಸಮಸ್ಯೆಗಳನ್ನು ಸೃಷ್ಟಿಸಿಕೊಳ್ಳುತ್ತಾರೆ ಮತ್ತು ಅನಾನುಕೂಲಗಳನ್ನು ಸೇರಿಸಿ ಈ ಸಮಸ್ಯೆಗಳನ್ನು ಸಮರ್ಥಿಸುತ್ತಾರೆ. ಸರ್ವಶಕ್ತನಾದ ಅಲ್ಲಾಹನ ದೃಷ್ಟಿಯಲ್ಲಿ ಅವು ಮಾನ್ಯವಾಗಿಲ್ಲ, ತೊಂದರೆಗಳ ವಿಷಯವು ಬಹಳ ವಿಷಾದವಾಗಿದೆ ಮನುಷ್ಯನು ಬಯಸಿದರೆ ಅವನು ತನ್ನ ಜೀವನದುದ್ದಕ್ಕೂ ಕುಳಿತು ಪ್ರಾರ್ಥಿಸುತ್ತಿದ್ದರು ಮತ್ತು ರಮಝಾನ್‌ನಲ್ಲಿ ಉಪವಾಸಗಳನ್ನು ಅನುಷ್ಠಿಸದಿದ್ದರು, ಅಲ್ಲಾಹನು ಆತನ ಉದ್ದೇಶ ಮತ್ತು ಪ್ರಾಮಾಣಿಕತೆಯನ್ನು ತಿಳಿದಿದ್ದಾನೆ, ಆತನು ಎಂತಹ ಪ್ರಾಮಾಣಿಕನಾಗಿದ್ದಾನೆ ಎಂದು. ಮತ್ತು ಸರ್ವಶಕ್ತನಾದ ಅಲ್ಲಾಹನಿಗೆ ಅರಿವಿದೆ ಆತನ ಮನಸ್ಸಿನಲ್ಲಿ ನೋವು ಇದೆ ಮತ್ತು ಅಲ್ಲಾಹನು ಆತನಿಗೆ ಪ್ರತಿಫಲಕ್ಕಿಂತ ಹೆಚ್ಚಿನದನ್ನು ನೀಡುತ್ತಾನೆ ಏಕೆಂದರೆ ಹೃದಯದ ನೋವು ಅಮೂಲ್ಯವಾದ ವಸ್ತುವಾಗಿದೆ. ಮನುಷ್ಯನು ನೆಪವನ್ನು ಮಾಡುತ್ತಾನೆ ಆದರೆ ಅಲ್ಲಾಹನ ಮುಂದೆ ಈ ನೆಪಗಳು ಯವ ವಸ್ತುವಲ್ಲ. ನಾನು ಆರು ತಿಂಗಳು ಉಪವಾಸಗಳನ್ನು ಅನುಷ್ಠಿಸಿದಾಗ ಒಮ್ಮೆ ಒಂದು ಪ್ರವಾದಿಗಳ ಗುಂಪು ನನ್ನನ್ನು (ಕಾಶ್ಫ್‌ನಲ್ಲಿ) ಭೇಟಿಯಾದರು ಅವರು ಹೇಳಿದರು: ನೀನು ನಿನ್ನ ಆತ್ಮವನ್ನು ಏಕೆ ಇಷ್ಟು ಕಷ್ಟದಲ್ಲಿ ಸಿಲುಕಿಸುತ್ತೀಯ, ಅದರಿಂದ ಹೊರಬರು. ಹೀಗೆ ಮನುಷ್ಯ ತನ್ನನ್ನು ತಾನು ಅಲ್ಲಾಹನಿಗಾಗಿ ತೊಂದರೆಗಳನ್ನು ಅನುಭವಿಸಿದರೆ ಅವನು ಸ್ವತಃ ಪೋಷಕರಂತೆ ಕರುಣೆ ತೋರಿಸಿ ನೀನು ಏಕೆ ತೊಂದರೆಯಲ್ಲಿದ್ದೀಯ ಎಂದು ಕರುಣೆ ತೋರುತ್ತಾನೆ.

### ಸರ್ವಶಕ್ತನಾದ ಅಲ್ಲಾಹನ ಕರುಣೆ

ಕಷ್ಟತೆಗಳಿಂದ ಹಾಗೂ ತೊಂದರೆಗಳಿಂದ ವಂಚಿತರಾಗಿರಿಸುವ ಜನರು ಇವರೇ ಆಗಿದ್ದಾರೆ, ಆದುದರಿಂದ ಪರಮಾತ್ಮನು ಅವರನ್ನು ಬೇರೆ ಕಷ್ಟಗಳಿಗೆ ಸಿಲುಕಿಸಿ ಹೊರತೆಗೆಯದೆ ತಾವೇ ಕಷ್ಟದಲ್ಲಿರುವ ಇತರರನ್ನು ಹೊರತೆಗೆಯುತ್ತಾನೆ. ಮನುಷ್ಯನು ತನ್ನ ಮೇಲೆ ಕರುಣೆ ತೋರದೆ, ಅಲ್ಲಾಹನು ಆತನ ಮೇಲೆ ಕರುಣೆದೋರುವಂತೆ ವರ್ತಿಸುವುದು ಕಡ್ಡಾಯವಾಗಿದೆ. ಏಕೆಂದರೆ ಮನುಷ್ಯನಿಗೆ ತನ್ನ ಮೇಲಿನ ಅನುಕಂಪವು ನರಕವಾಗಿದೆ ಮತ್ತು ಅಲ್ಲಾಹನ ಕರುಣೆಯು ಸ್ವರ್ಗವಾಗಿದೆ. ಬೆಂಕಿಯಲ್ಲಿ ಬೀಳಲು ಬಯಸುವ ಇಬ್ರಾಹೀಮ್(ಅ)ರ ಕಥೆಯನ್ನು ಪರಿಗಣಿಸಿ. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನು ಅವರನ್ನು ಬೆಂಕಿಯಿಂದ ರಕ್ಷಿಸುತ್ತಾನೆ ಮತ್ತು ಯಾರು ಬೆಂಕಿಯಿಂದ ತಪ್ಪಿಸಿಕೊಳ್ಳಲು ಬಯಸುತ್ತಾರೊ ಅವರಿಗೆ ಬೆಂಕಿಗೆ ಎಸೆಯಲಾಗುತ್ತದೆ.

**(ಮಲ್‌ಫೂಝಾತ್, ಸಂಪುಟ-2, ಪುಟ-564, ಖಾದಿಯನ್ 2003)**

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ 'ಮಸ್ಜಿದ್ ಮುಬಾರಕ್' ನಿಂದ ಖುತ್‌ಬ ಜುಮುಅವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ.

# ಖುತ್‌ಬ ಜುಮುಅ

ಹಝ್ರತ್ ಆಯಿಶ(ರ) ಯುದ್ಧ ಮೈದಾನದ ಅವಸ್ಥೆಯ ಬಗ್ಗೆ ಕೇಳಿದಾಗ ಹಝ್ರತ್ ಹಿಂದ್(ರ) ಹೀಗೆ ಉತ್ತರಿಸಿದರು: ರಸೂಲುಲ್ಲಾಹ್(ಸ) ಕ್ಷೇಮವಾಗಿದ್ದಾರೆ. ಅವರು ಇರುವಾಗ ಎಲ್ಲ ಕಷ್ಟತೆಗಳು ಸುಲಭವಾಗುತ್ತದೆ.

ಹಝ್ರತ್ ಹಂಝ(ರ)ರ ಅಗಲುವಿಕೆಯ ದುಃಖದ ಬಗ್ಗೆ ಹೇಳುವುದಾದರೆ, ಅದರ ದುಃಖ ಹಝ್ರತ್ ಪೈಗಂಬರ್(ಸ)ರಿಗೆ ಕೊನೆಯ ತನಕ ಇತ್ತು ಮತ್ತು ಅವರು ಯಾವಾಗಲೂ ಅದರ ಬಗ್ಗೆ ಪ್ರಸ್ತಾಪಿಸುತ್ತಿದ್ದರು.

ಮೃತರಿಗಾಗಿ ವಿಲಾಪಿಸುವುದು ಮತ್ತು ರೋದಿಸುವುದನ್ನು ಹಝ್ರತ್ ಪೈಗಂಬರ್(ಸ) ಬಹಳ ವಿವೇಕಯುತವಾಗಿ ತಡೆದರು.

**ನುಸೈಬಾ ಮಝಿನಿಯಾಹ್,** ಅಂದರೆ, ಹಝ್ರತ್ ಉಮ್ಮು ಅಮಾರಾ(ರ) ಹೊರತುಪಡಿಸಿ ಯಾವುದೇ ಮಹಿಳೆಯ ಬಗ್ಗೆ ಅವರು ಉಹುದ್ ದಿನದಂದು ಯುದ್ಧದಲ್ಲಿ ಭಾಗವಹಿಸಿದ್ದರು ಎಂದು ಸಾಬೀತಾಗಿಲ್ಲ.

ಹಝ್ರತ್ ಉಮ್ಮೆ ಅಮ್ಮಾರ(ರ) ಹಝ್ರತ್ ಪೈಗಂಬರ್(ಸ) ಅವರಿಗೆ ಹೇಳಿದರು: ನಾವು ನಿಮ್ಮೊಂದಿಗೆ ಸ್ವರ್ಗದಲ್ಲಿರಲು ಅಲ್ಲಾಹನಲ್ಲಿ ನಮಗಾಗಿ ದುಆ ಮಾಡಿರಿ. ಹಝ್ರತ್ ಪೈಗಂಬರ್(ಸ) ಅದೇ ರೀತಿ ದುಆ ಮಾಡಿದರು ಮತ್ತು ಹೇಳಿದರು: ಓ ಅಲ್ಲಾಹನೇ! ಅವರನ್ನು ಸ್ವರ್ಗದಲ್ಲಿ ನನ್ನ ಸ್ನೇಹಿತ ಮತ್ತು ಸಂಗಡಿಗರನ್ನಾಗಿ ಮಾಡು. ಅದೇ ಸಮಯದಲ್ಲಿ ಹಝ್ರತ್ ಉಮ್ಮ್ ಅಮ್ಮಾರಾ ಹೇಳಿದರು, ಜಗತ್ತಿನಲ್ಲಿ ನನಗೆ ಏನಾಗುತ್ತದೆ ಎಂದು ನಾನು ಹೆದರುವುದಿಲ್ಲ.

**ಉಹದ್ ಯುದ್ಧದ ನಂತರ ಸಹಾಬರವರ ತದ್‌ಫೀನ್ (ಅಂತ್ಯಕ್ರೀಯೆ)
ಮತ್ತು ಉಹುದ್ ಯುದ್ಧದಲ್ಲಿ ಮಹಿಳೆ ಸಹಾಬಿಗಳ ಧೈರ್ಯ ಹಾಗೂ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಇದ್ದ ಪ್ರೀತಿ ಮತ್ತು ವಾತ್ಸಲ್ಯದ ವಿಶ್ವಾಸ ವರ್ಧಕ ಪ್ರಸ್ತಾವನೆ**

ಐದು ದಿವಂಗತರಾದ ಮುಕರ್ರಮ್ ಘಸ್ಸಾನ್ ಖಾಲಿದ್ ಅನ್ನಖೀಬ್ ಸಆಹಿಬ್, ಮುಕರ್ರಮಾ ನೌಶಾಬ ಮುಬಾರಕ್ ಸಾಹಿಬಾ, ಮುಕರ್ರಮಾ ರಝಿಯಾ ಸುಲ್ತಾನ ಸಾಹಿಬಾ, ಮುಕರ್ರಮ್ ಅಬ್ದುಲ್ ಹಮೀದ್ ಖಾನ್ ಸಾಹಿಬ್, ಮುಕರ್ರಮಾ ಬುಶ್ರಾ ಬೇಗಮ್ ಸಾಹಿಬಾ ಹಾಗೂ ಮುಕರ್ರಮ್ ರಶೀದ್ ಅಹ್ಮದ್ ಚೌಧರಿ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **01-03-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಉಹುದ್ ಯುದ್ಧದ ಸ್ಥಿತಿಗತಿಗಳನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಗಾಯಾಳುಗಳನ್ನು ಮತ್ತು ಶಹೀದರನ್ನು ಒಟ್ಟುಗೂಡಿಸಿದರು. ಗಾಯಾಳುಗಳಿಗೆ ಔಷಧಿ ಹಾಕಿ ಬಟ್ಟೆ ಕಟ್ಟಲಾಯಿತು ಮತ್ತು ಶಹೀದರನ್ನು ದಫನ್ ಮಾಡಲು ಏರ್ಪಾಡು ಮಾಡಲಾಯಿತು. ಸತ್ಯನಿಷೇಧಿಗಳು ಕೆಲವು ಸಹಾಬಿಯರನ್ನು ಶಹೀದ್ ಮಾಡಿದ್ದರಲ್ಲದೇ ಅವರ ಮೂಗು ಮತ್ತು ಕಿವಿಗಳನ್ನು ಕೂಡ ಕತ್ತರಿಸಿದ್ದಾರೆ ಎಂದು ಆಗ ಗೊತ್ತಾಯಿತು. ಇದನ್ನು ನೋಡಿ ಹಝ್ರತ್ ಪೈಗಂಬರ್(ಸ)ರಿಗೆ ಬಹಳ ದುಃಖವಾಯಿತು. ಆ ಶಹೀದರಲ್ಲಿ ಹಝ್ರತ್ ಪೈಗಂಬರ್(ಸ)ರ ದೊಡ್ಡಪ್ಪ ಹಝ್ರತ್ ಹಂಝ(ರ) ಸಹ ಇದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಯಾವುದನ್ನು ನಾವು ನಿಷಿದ್ಧವೆಂದು ಭಾವಿಸುತ್ತಿದ್ದೆವೋ ಅದನ್ನು ಸತ್ಯನಿಷೇಧಿಗಳು ಸ್ವತಃ ತಮ್ಮ ಕೃತ್ಯದಿಂದ ನಮಗಾಗಿ ಇದರ ಪ್ರತೀಕಾರ ಮಾಡುವುದನ್ನು ಅನುಮತನೀಯವನ್ನಾಗಿ ಮಾಡಿದ್ದಾರೆ. 'ಸತ್ಯನಿಷೇಧಿಗಳು ಏನನ್ನು ಮಾಡುತ್ತಾರೋ ಅದನ್ನು ಮಾಡಲು ಬಿಡಿರಿ ನೀವು ನ್ಯಾಯ ಮತ್ತು ಸಹಾನುಭೂತಿಯ ಮಾರ್ಗದಲ್ಲಿ ದೃಢವಾಗಿ ನಿಲ್ಲಿರಿ' ಎಂದು ಆಗ ಅಲ್ಲಾಹನ ಕಡೆಯಿಂದ ದಿವ್ಯವಾಣಿ ಅವತೀರ್ಣವಾಯಿತು. (ದೀಬಾಚ ತಫಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಮುಘಟ-20, ಪುಟ-254-255) ಇದು ಇಸ್ಲಾಮಿನ ಬೋದನೆಯಾಗಿದೆ.

ಹಝ್ರತ್ ಹಂಝ(ರ)ರನ್ನು ದಫನ್ ಮಾಡಿದ್ದರ ಕುರಿತು ಹೀಗೆ ಪ್ರಸ್ತಾಪಿಸಲಾಗಿದೆ: ಅವರನ್ನು ಒಂದೇ ಬಟ್ಟೆಯಲ್ಲಿ ಕಫನ್ ಮಾಡಲಾಯಿತು. ಅವರ ತಲೆಯನ್ನು ಮರೆಸುವಾಗ ಕಾಲುಗಳಿಂದ ಬಟ್ಟೆ ಸರಿದು ಹೋಗುತ್ತಿತ್ತು. ಕಾಲುಗಳನ್ನು ಮರೆಸುವಾಗ ಮುಖದಿಂದ ಬಟ್ಟೆ ಸರಿದುಹೋಗುತ್ತಿತ್ತು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅವರ ಮುಖವನ್ನು ಮರೆಸಿರಿ ಮತ್ತು ಕಾಲುಗಳನ್ನು ಹುಲ್ಲುಗಳಿಂದ ಮರೆಸಿರಿ. ಹಝ್ರತ್ ಹಮ್‌ಝಾ(ರ) ಮತ್ತು ಅವರ ಸೋದರಳಿಯರಾದ ಹಝ್ರತ್ ಅಬ್ದುಲ್ಲಾ ಬಿನ್ ಜಹ್ಶ್(ರ) ಅವರನ್ನು ಒಂದೇ ಖಬರ್‌ನಲ್ಲಿ ದಫನ್ ಮಾಡಲಾಯಿತು. ಹಝ್ರತ್ ಪೈಗಂಬರ್(ಸ)ರು ಮೊದಲು ಹಝ್ರತ್ ಹಮ್‌ಝಾ(ರ) ಅವರ ನಮಾಝೆ ಜನಾಝವನ್ನು ನಿರ್ವಹಿಸಿದರು. ಇದು ಅತ್ತಬಖಾತುಲ್ ಕುಬ್ರಾದ ಉಲ್ಲೇಖವಾಗಿದೆ. (ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟಗಳು 6-7, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1990) (ಮುಸ್ನದ್ ಅಹ್ಮದ್, ಸಂಪುಟ-7, ಪುಟ-72, ಹದೀಸ್-21378, ಆಲಮುಲ್ ಕುತುಬ್ ಬೈರುತ್ 1998)

ಮತ್ತು ಈ ಶಹೀದರ ನಮಾಝೆ ಜನಾಝಗಳನ್ನು ನಿರ್ವಹಿಸಲಾಗಿದೆಯೊ ಅಥವಾ ನಿರ್ವಹಿಸಲಾಗಲಿಲ್ಲವೊ ಎಂಬ ಚರ್ಚೆಯನ್ನು ನಾನು ಕಳೆದ ಖುತ್‌ಬಜುಮುಅದಲ್ಲಿ ವಿವರಿಸಿದ್ದೇನೆ.

ಮೃತರಿಗಾಗಿ ವಿಲಾಪಿಸುವುದು ಮತ್ತು ರೋದಿಸುವುದನ್ನು ಹಝ್ರತ್ ಪೈಗಂಬರ್(ಸ) ಎಷ್ಟು ವಿವೇಕಯುತವಾಗಿ ತಡೆದರು ಎಂಬುದರ ಬಗ್ಗೆ ಒಂದು ವರದಿಯಲ್ಲಿ ಬಂದಿದೆ. ಅದನ್ನು ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ) ವರದಿ ಮಾಡುತ್ತಾರೆ. ಹಝ್ರತ್ ಪೈಗಂಬರ್(ಸ) ಉಹುದಿನಿಂದ ಮರಳಿ ಬಂದಾಗ, ಅನ್ಸಾರಿ ಮಹಿಳೆಯರು ತಮ್ಮ ಪತಿಗಳಿಗಾಗಿ ವಿಲಾಪಿಸುವುದನ್ನು ಮತ್ತು ರೋದಿಸುವುದನ್ನು ಅವರು ಕಂಡರು. ಹಝ್ರತ್ ಪೈಗಂಬರ್(ಸ) ಕೇಳಿದರು: ಇದೇನು? ಹಂಝರಿಗಾಗಿ ಅಳುವವರು ಯಾರೂ ಇಲ್ಲವೇ? ಈ ಮಾತು ಮಹಿಳೆಯರಿಗೆ ಗೊತ್ತಾದಾಗ ಅವರು ಹಝ್ರತ್ ಹಂಝ(ರ) ಶಹೀದ್ ಆಗಿದ್ದಕ್ಕಾಗಿ ವಿಲಾಪಿಸಲು ಒಟ್ಟುಗೂಡಿದರು. ಹಝ್ರತ್ ಪೈಗಂಬರ್(ಸ) ಈ ಮಹಿಳೆಯರಿಂದ ಸ್ವಲ್ಪ ದೂರದಲ್ಲಿ ಮಸೀದಿಯಲ್ಲಿ ಇದ್ದರು ಎಂದು ತೋರುತ್ತದೆ. ಹಝ್ರತ್ ಪೈಗಂಬರ್(ಸ) ನಿದ್ದೆ ಹೋದರು. ಅವರು ಎಚ್ಚೆತ್ತಾಗ ಮಹಿಳೆಯರು ಅದೇ ರೀತಿಯಲ್ಲಿ ಅಳುತ್ತಿದ್ದರು. ಹಝ್ರತ್ ಪೈಗಂಬರ್(ಸ) ಕೇಳಿದರು: 'ಏನು ಇಂದು ಹಂಝರ ಹೆಸರೆತ್ತಿ ಈ ಮಹಿಳೆಯರು ಅಳುತ್ತಲೇ ಇರುವರೋ? ಅಳುವುದನ್ನು ನಿಲ್ಲಿಸುವುದಿಲ್ಲವೇ? ಅವರೊಡನೆ ಮರಳಿ ಹೋಗಲು ಹೇಳಿರಿ.'

ತಮ್ಮ ಮನೆಗಳಿಗೆ ಮರಳಿ ಹೋಗಲು ಮತ್ತು ಇನ್ನು ಮುಂದೆ ಮೃತಪಡುವ ಯಾರಿಗಾಗಿಯೂ ಪ್ರಲಾಪಿಸದಿರಲು ಮತ್ತು ರೋದಿಸದಿರಲು ಹಝ್ರತ್ ಪೈಗಂಬರ್(ಸ) ನಿರ್ದೇಶನ ನೀಡಿದರು. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-2, ಪುಟ-418-419, ಹದೀಸ್-5563, ಆಲಿಮುಲ್ ಕುತುಬ್ ಬೈರುತ್ 1998)

ಹೀಗೆ ಬಹಳ ಯುಕ್ತಿಯಿಂದ ಹಝ್ರತ್ ಪೈಗಂಬರ್(ಸ) ಅನ್ಸಾರಿನ ಮಹಿಳೆಯರ ಭಾವನೆಗಳಿಗೆ ಗಮನ ಕೊಟ್ಟರು. ಅವರನ್ನು ಅವರ ಪತಿಯರ ಮತ್ತು ಸಹೋದರರ ಅಗಲುವಿಕೆಯ ಕಾರಣದಿಂದ ವಿಲಾಪಿಸುವುದನ್ನು ತಡೆಯುವುದಕ್ಕೆ ಬದಲಾಗಿ ಹಝ್ರತ್ ಹಂಝ(ರ)ರ ಬಗ್ಗೆ ಪ್ರಸ್ತಾಪಿಸಿದರು. ಅವರಿಗಾಗಿ ಅಳುವವರು ಯಾರೂ ಇಲ್ಲವೇ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಹಂಝ(ರ) ಶಹೀದ್ ಆಗಿದ್ದನ್ನು ಕಂಡು ಮತ್ತು ಅವರ ಮೃತದೇಹವನ್ನು ವಿರೂಪಗೊಳಿಸಿದ್ದನ್ನು ಕಂಡು ಹಝ್ರತ್ ಪೈಗಂಬರ್(ಸ)ರಿಗೆ ಬಹಳ ದುಃಖವಾಗಿತ್ತು. ಆದರೆ ಅನ್ಸಾರಿನ ಮಹಿಳೆಯರು ರೋದಿಸುವುದನ್ನು ನಿಲ್ಲಿಸದೇ ಇರುವುದನ್ನು ಕಂಡಾಗ ಈ ದುರಾಚಾರವನ್ನು ಕೊನೆಗೊಳಿಸಲಿಕ್ಕಾಗಿ ತಮ್ಮ ಮಾದರಿಯನ್ನು ತೋರಿಸಿದರು ಮತ್ತು ಅವರೊಡನೆ ಸಹನೆದೋರಲು ಹೇಳಿದರು. ಆ ಉಪದೇಶ ಪ್ರಭಾವಶಾಲಿಯಾಗಿತ್ತು.

ಹಝ್ರತ್ ಹಂಝ(ರ)ರ ಅಗಲುವಿಕೆಯ ದುಃಖದ ಬಗ್ಗೆ ಹೇಳುವುದಾದರೆ, ಅದರ ದುಃಖ ಹಝ್ರತ್ ಪೈಗಂಬರ್(ಸ)ರಿಗೆ ಕೊನೆಯ ತನಕ ಇತ್ತು ಮತ್ತು ಅವರು ಯಾವಾಗಲೂ ಅದರ ಬಗ್ಗೆ ಪ್ರಸ್ತಾಪಿಸುತ್ತಿದ್ದರು.

ಹಝ್ರತ್ ಕಅ್‌ಬ್ ಬಿನ್ ಮಾಲಿಕ್(ರ) ಅವರು ಹಝ್ರತ್ ಹಮ್‌ಝಾ(ರ) ಅವರ ಸಹಾದತ್ತಿನ ಕುರಿತು ಸಂತಾಪದಲ್ಲಿ ತಮ್ಮ ಶೋಕಕಾವ್ಯದಲ್ಲಿ ಹೀಗೆ ಹೇಳುತ್ತಾರೆ ನನ್ನ ಕಣ್ಣುಗಳು ಕಣ್ಣೀರು ಸುರಿಸುತ್ತವೆ ಮತ್ತು ಹಮ್‌ಝಾ ಅವರ ಸಾವಿನ ಬಗ್ಗೆ ಅಳಲು ಅದಕ್ಕೆ ಹಕ್ಕಿದೆ. ಆದರೆ ದೇವರ ಸಿಂಹದ ಸಾವಿಗೆ ಅಳುತ್ತಾ ಕಿರಿಚುತ್ತಾ ಏನು ಸಾಧಿಸಲು ಸಾಧ್ಯ. ಆ ದೇವರ ಸಿಂಹ, ಹಮ್‌ಝಾ, ಅವರು ಹುತಾತ್ಮರಾದ ದಿವಸು ಇಂದು ಈ ಧೈರ್ಯಧಶಾಲಿ ಯುವಕ ಹುತಾತ್ಮನಾಗಿದ್ದಾನೆ ಎಂದು ಇಡೀ ಜಗತ್ತು ಹೇಳಿತು. (ಅಸದುಲ್ ಗ್ಹಾಬ, ಸಂಪುಟ-2, ಪುಟ-69, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 2003)

ಹಝ್ರತ್ ಮುಸ್‌ಅಬ್(ರ)ರನ್ನು ದಫನ್ ಮಾಡಿದ್ದ ಬಗ್ಗೆ ಹೀಗೆ ಪ್ರಸ್ತಾಪವಿದೆ. ಹಝ್ರತ್ ಪೈಗಂಬರ್(ಸ) ಹಝ್ರತ್ ಮುಸ್‌ಅಬ್ ಬಿನ್ ಉಮೈರ್(ರ)ರ ಮೃತದೇಹದ ಸಮೀಪಕ್ಕೆ ತಲುಪಿದರು. ಅವರ ಮೃತದೇಹವು ಮುಖ ಕೆಳಗಾಗಿ ಬಿದ್ದಿತ್ತು. ಅವರನ್ನು ನೋಡಿ ಹಝ್ರತ್ ಪೈಗಂಬರ್(ಸ) ಪವಿತ್ರ ಖುರ್‌ಆನಿನ ಈ ವಚನವನ್ನು ಓದಿದರು: **ಮಿನಲ್‌ಮುಮಿನೀನ ರಿಜಾಲುನ್ ಸದಖೂ ಮಾ ಆಹದೂ ಲ್ಲಾಹ ಅಲೈಹಿ ಫಮಿನ್‌ಹುಮ್ ಮನ್‌ಖಝಾ ನಹ್‌ಬಹೂ ವ ಮಿನ್‌ಹುಮ್ ಮೈಂಯನ್‌ತಝಿರು ವಮಾ ಬದ್ದಲೂ ತಬ್ದೀಲಾ** (ಅಲ್‌ಅಹ್‌ಝಾಬ್-24) "ಅಲ್ಲಾಹನೊಡನೆ ತಾವು ಮಾಡಿದ ಒಡಂಬಡಿಕೆಯನ್ನು ಪಾಲಿಸಿದ ಕೆಲವರು ಆ ಸತ್ಯವಿಶ್ವಾಸಿಗಳ ಪೈಕಿಯಲ್ಲಿದ್ದಾರೆ. ಅವರಲ್ಲಿ ಕೆಲವರು ತಮ್ಮ ಪ್ರತಿಜ್ಞೆಯನ್ನು ಈಡೇರಿಸಿದ್ದಾರೆ. ಇನ್ನು ಕೆಲವರು ಅದಕ್ಕೋಸ್ಕರ ತಮ್ಮ ಸರದಿಯನ್ನು ಕಾಯುತ್ತಿದ್ದಾರೆ." ಈ ವಚನವನ್ನು ಪಠಿಸಿ ಹಝ್ರತ್ ಪೈಗಂಬರ್(ಸ) ಹೇಳಿದರು: **ಇನ್ನ ರಸೂಲಲ್ಲಾಹಿ ಯಶ್‌ಹದು ಅನ್ನಕುಮುಶ್ಶುಹದಾಉ ಇಂದಲ್ಲಾಹಿ ಯೌಮಲ್ ಖಿಯಾಮತಿ** ಅಂದರೆ: ನೀವು ಖಿಯಾಮತ್ ದಿನದಂದು ಸಹ ಅಲ್ಲಾಹನ ಸನ್ನಿಧಿಯಲ್ಲಿ ಶುಅದಾಅ್ ಆಗಿರುತ್ತೀರಿ ಎಂದು ಅಲ್ಲಾಹನ ರಸೂಲ್ ಸಾಕ್ಷ್ಯ ಹೇಳುತ್ತಾರೆ. ಅನಂತರ ಹಝ್ರತ್ ಪೈಗಂಬರ್(ಸ) ಸಹಾಬಿಯರಿಗೆ ಹೀಗೆ ನಿರ್ದೇಶನ ನೀಡಿದರು: ಅವರ ಝಿಯಾರತ್ ಮಾಡಿರಿ ಮತ್ತು ಅವರಿಗೆ ಸಲಾಮ್ ಹೇಳಿರಿ. ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನ ಮೇಲೆ ಆಣೆ ಹಾಕಿ ಹೇಳುತ್ತೇನೆ, ಖಿಯಾಮತ್ ದಿನದ ವರೆಗೆ ಯಾರು ಇವರ ಮೇಲೆ ಸಲಾಂ ಹೇಳುವರೋ, ಆ ಸಲಾಮಿಗೆ ಇವರು ಉತ್ತರ ನೀಡುವರು. ಹಝ್ರತ್ ಮುಸ್‌ಅಬ್(ರ) ಅವರ ಸಹೋದರ ಹಝ್ರತ್ ಅಬೂ ರೂಮ್ ಬಿನ್ ಉಮೈರ್(ರ) ಹಝ್ರತ್ ಸುವೈಬಿತ್ ಬಿನ್ ಸಅ್‌ದ್(ರ)ರವರು ಹಝ್ರತ್ ಮುಸ್‌ಅಬ್(ರ) ಅವರನ್ನು ಖಬರ್‌ನಲ್ಲಿ ಇಳಿಸಿದರು. (ಅತ್ತಬಖಾತುಲ್ ಕುಬ್ರ, ಭಾಗ-3, ಪುಟ-89-90, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1990)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಸೀರತ್ ಖಾತಮನ್ನಬೀಯೀನ್‌ನಲ್ಲಿ ಬರೆಯುತ್ತಾರೆ: "ಉಹುದ್‌ನ ಶಹೀದರಲ್ಲಿ ಒಬ್ಬರು ಮುಸ್‌ಅಬ್ ಬಿನ್ ಉಮೈರ್(ರ) ಇದ್ದರು. ಅವರು ಇಸ್ಲಾಂ ಧರ್ಮದ ಪ್ರಚಾರಕರಾಗಿ ಮದೀನಕ್ಕೆ ಬಂದ ಮೊದಲ ಮುಹಾಜಿರ್ ಆಗಿದ್ದರು. ಅಜ್ಞಾನ ಕಾಲದಲ್ಲಿ (ಜಾಹಿಲಿಯಾ ಕಾಲದಲ್ಲಿ) ಮುಸ್‌ಅಬ್ ಮಕ್ಕಾದ ಯುವಕರಲ್ಲಿ ಅತ್ಯಂತ ಉತ್ತಮವಾದ ಬಟ್ಟೆಗಳನ್ನು ಧರಿಸುತ್ತಿದ್ದ ಮತ್ತು ಉತ್ತಮವಾದ ಬಟ್ಟೆಗಳನ್ನು ಹೊಂದಿದ್ದರೆಂದು ಪರಿಗಣಿಸಲ್ಪಟ್ಟಿದ್ದರು. ಇಸ್ಲಾಂ ಧರ್ಮ ಸ್ವೀಕರಿಸಿದ ನಂತರ, ಅವರ ಸ್ಥಿತಿ ಸಂಪೂರ್ಣವಾಗಿ ಬದಲಾಯಿತು. ಹೀಗೆ, ಹಝ್ರತ್ ಪೈಗಂಬರ್(ಸ)ರು ಒಮ್ಮೆ ಅವರ ದೇಹದ ಮೇಲೆ ಅನೇಕ ಹೊಲಿಗೆಗಳನ್ನು ಹೊಂದಿರುವ ಬಟ್ಟೆಯನ್ನು ನೋಡಿದರು. ಆಗ ಅವರಿಗೆ(ಸ) ಅವರ ಮೊದಲ ಕಾಲ ನೆನಪಾದಾಗ ಅವರ(ಸ) ಕಣ್ಣುಗಳಲ್ಲಿ ನೀರು ತುಂಬಿತು." ಮುಸ್‌ಅಬ್(ರ) ಉಹದ್‌ನಲ್ಲಿ ಶಹೀದ್ ಆದಾಗ ಅವರ ದೇಹವನ್ನು ಮುಚ್ಚುವಷ್ಟು ಬಟ್ಟೆ ಕೂಡ ಇರಲಿಲ್ಲ. ಅವರ ತಲೆಯನ್ನು ಮರೆಸುವಾಗ ಕಾಲುಗಳಿಂದ ಬಟ್ಟೆ ಸರಿದು ಹೋಗುತ್ತಿತ್ತು. ಕಾಲುಗಳನ್ನು ಮರೆಸುವಾಗ ಮುಖದಿಂದ ಬಟ್ಟೆ ಸರಿದುಹೋಗುತ್ತಿತ್ತು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅವರ ಮುಖವನ್ನು ಮರೆಸಿರಿ ಮತ್ತು ಕಾಲುಗಳನ್ನು ಹುಲ್ಲುಗಳಿಂದ ಮರೆಸಿರಿ.

(ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-501)

ಉಹುದ್ ದಿನದಂದು, ಯುದ್ಧದ ನಂತರ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್‌ರು ಒಂದು ದುಆ ಮಾಡಿದರು. ಹಝ್ರತ್ ರಿಫಾಅ ಬಿನ್ ರಾಫಿ' ಝುರಾಕಿ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ)ರವರು ಸಹಾಬಿಗಳನ್ನು ದಫನ್ ಮಾಡಿದ ನಂತರ ತಮ್ಮ ಕುದುರೆಯನ್ನು ಏರಿದರು ಮತ್ತು ಮುಸ್ಲಿಮರು ಅವರ ಸುತ್ತಲೂ ಇದ್ದರು. ಅವರಲ್ಲಿ ಹೆಚ್ಚಿನವರು ಗಾಯಗೊಂಡಿದ್ದರು ಮತ್ತು ಬನೂ ಸಲಮಾ ಮತ್ತು ಬನೂ ಅಬ್ದ್ ಅಲ್-ಅಶ್ಹಲ್ ಹೋತ್ರದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಗಾಯಗೊಂಡಿದ್ದರು ಮತ್ತು ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಹದಿನಾಲ್ಕು ಮಹಿಳೆಯರು ಇದ್ದರು. ಅವರು ಉಹುದ್‌ನ ಕೆಳಗೆ ತಲುಪಿದಾಗ, ಅವರು(ಸ) ಹೇಳಿದರು: ನೀವೆಲ್ಲರೂ ಪಂಕ್ತಿಗಳನ್ನು ರೂಪಿಸಿಕೊಳ್ಳಿ ನಾನು ಸರ್ವಶಕ್ತನಾದ ಅಲ್ಲಾಹನನ್ನು ಸ್ತುತಿಸುತ್ತೇನೆ ಆದ್ದರಿಂದ ಹಝ್ರತ್ ಪೈಗಂಬರ್(ಸ) ಅವರ ಹಿಂದೆ ಪುರುಷರು ಪಂಕ್ತಿಗಳನ್ನು ಮಾಡಿದರು ಅವರ ಹಿಂದೆ ಮಹಿಳೆಯರು ಪಂಕ್ತಿಗಳನ್ನು ಮಾಡಿ ನಿಂತುಕೊಂಡರು. ತದನಂತರ ಹಝ್ರತ್ ಪೈಗಂಬರ್(ಸ)ರವರು ಹೀಗೆ ದುಆ ಮಾಡಿದರು:

اَللّٰهُمَّ لَكَ الْحَمْدُ كُلُّهُ اَللّٰهُمَّ لَا قَابِضَ لِمَا بَسَطْتَ وَلَا بَاسِطَ لِمَا قَبَضْتَ وَلَا هَادِيَ لِمَنْ أَضْلَلْتَ وَلَا مُضِلَّ لِمَنْ هَدَيْتَ وَلَا مُعْطِيَ لِمَا مَنَعْتَ وَلَا مَانِعَ لِمَا أَعْطَيْتَ وَلَا مُقَرِّبَ لِمَا بَاعَدْتَ وَلَا مُبْعِدَ لِمَا قَرَّبْتَ. اَللّٰهُمَّ ابْسُطْ عَلَيْنَا مِنْ بَرَكَاتِكَ وَرَحْمَتِكَ وَفَضْلِكَ وَرِزْقِكَ. اَللّٰهُمَّ إِنَّا نَسْأَلُكَ النَّعِيمَ الْمُقِيمَ الَّذِي لَا يَحُولُ وَلَا يَزُولُ اَللّٰهُمَّ إِنَّا نَسْأَلُكَ النَّعِيمَ يَوْمَ الْعَيْلَةِ. اَللّٰهُمَّ إِنَّا نَسْأَلُكَ الْأَمْنَ يَوْمَ الْخَوْفِ. وَالْغِنٰى يَوْمَ الْفَاقَةِ. اَللّٰهُمَّ إِنِّي عَائِذٌ بِكَ مِنْ شَرِّ مَا أَعْطَيْتَنَا وَمِنْ شَرِّ مَا مَنَعْتَنَا. اَللّٰهُمَّ حَبِّبْ إِلَيْنَا الْإِيمَانَ وَزَيِّنْهُ فِي قُلُوبِنَا. وَكَرِّهْ إِلَيْنَا الْكُفْرَ وَالْفُسُوقَ وَالْعِصْيَانَ وَاجْعَلْنَا مِنَ الرَّاشِدِينَ. اَللّٰهُمَّ تَوَفَّنَا مُسْلِمِينَ وَأَحْيِنَا مُسْلِمِينَ وَأَلْحِقْنَا بِالصَّالِحِينَ غَيْرَ خَزَايَا وَلَا مَفْتُونِينَ. اَللّٰهُمَّ قَاتِلِ الْكَفَرَةَ الَّذِينَ يُكَذِّبُونَ رُسُلَكَ وَيَصُدُّونَ عَنْ سَبِيلِكَ. وَاجْعَلْ عَلَيْهِمْ رِجْزَكَ وَعَذَابَكَ. اَللّٰهُمَّ قَاتِلِ الْكَفَرَةَ الَّذِينَ أُوتُوا الْكِتَابَ إِلٰهَ الْحَقِّ. آمين۔

ಅಂದರೆ: ಹೇ ಅಲ್ಲಾಹ್, ಎಲ್ಲ ಸ್ತುತಿಕೀರ್ತನೆಗಳು ನಿನಗಾಗಿ. ಹೇ ಅಲ್ಲಾಹ್, ಯಾವುದನ್ನು ನೀನು ವಿಶಾಲಗೊಳಿಸುತ್ತೀಯೋ ಅದನ್ನು ತಡೆಯುವವರು ಯಾರೂ ಇಲ್ಲ. ಯಾವುದನ್ನು ನೀನು ಸಂಕುಚಿತಗೊಳಿಸುತ್ತೀಯೋ ಅದನ್ನು ಯಾರಿಗೂ ವಿಶಾಲಗೊಳಿಸಲು ಸಾಧ್ಯವಿಲ್ಲ. ನೀನು ಯಾರನ್ನಾದರೂ ದಾರಿತಪ್ಪಲು ಬಿಟ್ಟರೆ ಮತ್ತೆ ಅವರಿಗೆ ಸರಿದಾರಿ ತೋರಿಸಲು ಯಾರೂ ಇಲ್ಲ. ನೀನು ಯಾರಿಗಾದರೂ ಸನ್ಮಾರ್ಗ ನೀಡಿದರೆ ಅವರನ್ನು ಯಾರಿಂದಲೂ ದಾರಿತಪ್ಪಿಸಲು ಸಾಧ್ಯವಿಲ್ಲ. ಯಾವುದನ್ನು ನೀನು ತಡೆಯುತ್ತೀಯೋ ಅದನ್ನು ನೀಡುವವನೂ ಯಾರೂ ಇಲ್ಲ. ಯಾವುದನ್ನು ನೀನು ದಯಪಾಲಿಸುತ್ತೀಯೋ ಅದನ್ನು ತಡೆಯುವವನೂ ಯಾರೂ ಇಲ್ಲ. ಯಾವುದನ್ನು ನೀನು ದೂರ ಮಾಡುತ್ತೀಯೋ ಅದನ್ನು ಸಮೀಪಗೊಳಿಸುವವನು ಯಾರೂ ಇಲ್ಲ. ಯಾವುದನ್ನು ನೀನು ಸಮೀಪಗೊಳಿಸುತ್ತೀಯೋ ಅದನ್ನು ದೂರ ಮಾಡುವವನೂ ಯಾರೂ ಇಲ್ಲ. ಹೇ ಅಲ್ಲಾಹ್, ನಮ್ಮನ್ನು ಮುಸ್ಲಿಮರಾಗಿ ಇರುವ ಸ್ಥಿತಿಯಲ್ಲಿ ಮೃತಪಡಿಸು. ನಮ್ಮನ್ನು ಮುಸ್ಲಿಮರಾಗಿ ಇರುವ ಸ್ಥಿತಿಯಲ್ಲಿ ಜೀವಂತಗೊಳಿಸು. ನಾವು ನಿಂದಿತರಾಗದ ಸ್ಥಿತಿಯಲ್ಲಿ ಮತ್ತು ಯಾವುದೇ ಫಿತ್ನಕ್ಕೆ ಗುರಿಯಾಗದೇ ಇರುವ ಸ್ಥಿತಿಯಲ್ಲಿ ನಮ್ಮನ್ನು ಸತ್ಕರ್ಮಿಗಳ ಜೊತೆಗೆ ಸೇರಿಸು. ಹೇ ಅಲ್ಲಾಹ್, ಹೇ ಯಥಾರ್ಥ ಆರಾಧ್ಯನೇ, ನಿನ್ನ ಪ್ರವಾದಿಗಳನ್ನು ನಿರಾಕರಿಸುವ ಮತ್ತು ನಿನ್ನ ಮಾರ್ಗದಿಂದ ತಡೆಯುವ

ಸತ್ಯನಿಷೇಧಿಗಳನ್ನು ನೀನು ನಾಶಪಡಿಸು. ಅವರ ಮೇಲೆ ನಿನ್ನ ಶಿಕ್ಷೆಯನ್ನು ಇಳಿಸು. ಹೇ ಅಲ್ಲಾಹ್, ಗ್ರಂಥಾನುಸಾರಿಗಳಾದ ಸತ್ಯನಿಷೇಧಿಗಳನ್ನು ನೀನು ನಾಶಪಡಿಸು. ಆಮೀನ್. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ-4, ಪುಟ-227, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1993)

ಉಹುದ್ ಯುದ್ಧದಲ್ಲಿ ಮಹಿಳೆಯರು ಕೂಡ ಪುರುಷರ ಜೊತೆಜೊತೆಗೆ ಸೇವೆ ಮಾಡುವುದರಲ್ಲಿ ಉನ್ನತವಾದ ಪಾತ್ರವನ್ನು ವಹಿಸಿದ್ದರು, ಇದರ ಬಗ್ಗೆ ಮುಂಚೆಯು ವಿವರಿಸಲಾಗಿದೆ. ಇನ್ನಷ್ಟು ಪ್ರಸ್ತಾಪಿಸುತ್ತೇನೆ.

ಪುರುಷರು ಸ್ವಯಂ ತ್ಯಾಗದ ಇತಿಹಾಸವನ್ನು ನಿರ್ಮಿಸಿದ ಉಹುದ್ ಯುದ್ಧದಲ್ಲಿ, ಮಹಿಳೆಯರು ಸಹ ಇಸ್ಲಾಮಿನ ಸೈನ್ಯದೊಂದಿಗೆ ಸೇವೆ ಸಲ್ಲಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದರು. ಉಹುದ್ ಯುದ್ಧದಲ್ಲಿ ಹಝ್ರ಼ತ್ ಉಮ್ಮು ಸಲ್ಮಾ(ರ) ಭಾಗವಹಿಸಿದ ಬಗ್ಗೆ ಪ್ರಸ್ತಾಪ ಬರುತ್ತದೆ.

ಹಝ್ರತ್ ಮುತಾಲಿಬ್ ಬಿನ್ ಅಬ್ದುಲ್ಲಾ ಬಿನ್ ಹಂತಬ್(ರ) ಅವರು ಹೇಳುತ್ತಾರೆ, ಹಝ್ರತ್ ಪೈಗಂಬರ್(ಸ)ರು ಉಹದ್‌ಗೆ ಹೊರಟ ದಿನ, ಹಝ್ರತ್ ಪೈಗಂಬರ್(ಸ)ರು ದಾರಿಯಲ್ಲಿ ಮದೀನಾ ಬಳಿಯಿರುವ "ಶೈಖೈನ್" ಎಂಬ ಸ್ಥಳದಲ್ಲಿ ರಾತ್ರಿ ತಂಗಿದ್ದರು. ಹಝ್ರತ್ ಉಮ್ಮು ಸಲ್ಮಾ(ರ) ಒಂದು ಹುರಿದ ದಸ್ತಿ (ಮಾಂಸದ ತುಂಡು) ಯನ್ನು ತಂದರು, ಹಝ್ರತ್ ಪೈಗಂಬರ್(ಸ) ರವರು ಅದನ್ನು ಸೇವಿಸಿದರು. ಅದೇ ರೀತಿಯಲ್ಲಿ, ನಬೀಝ್ ಕೂಡ ತರಲಾಯಿತು ಅವರು(ಸ) ನಬೀಝ್ ಅನ್ನು ಕುಡಿದರು. (ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟ-67, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1990)

ಹಝ್ರತ್ ಅನಸ್(ರ) ಹೇಳುತ್ತಾರೆ: ಉಹುದ್ ದಿನದಂದು ನಾನು ಹಝ್ರತ್ ಆಯಿಷಾ ಸಿದ್ದಿಖಾ(ರ) ಮತ್ತು ಅವರ ತಾಯಿ ಉಮ್ಮು ಸುಲೈಮ್(ರ) ಅವರನ್ನು ಚರ್ಮದ ಚೀಲದಲ್ಲಿ ನೀರನ್ನು ತುಂಬಿಸಿ ತಂದು ಬಾಯಾರಿದವರಿಗೆ ಕುಡಿಸುವುದನ್ನು ನಾನು ನೋಡಿದ್ದೇನೆ. ಸಹೀಹ್ ಬುಖಾರಿಯ ಒಂದು ವರದಿ ಹೀಗಿದೆ: ಹಝ್ರತ್ ಅನಸ್(ರ) ಹೇಳುತ್ತಾರೆ: ಉಹುದ್ ದಿನದಂದು ಜನರು ಸೋಲಿಸಲ್ಪಟ್ಟರು ಮತ್ತು ಹಝ್ರತ್ ಪೈಗಂಬರ್(ಸ) ಅವರಿಂದ ದೂರ ಸರಿದರು. ನಂತರ ವರದಿಗಾರರು ಹೇಳುತ್ತಾರೆ: ಮತ್ತು ನಾನು ಹಝ್ರತ್ ಆಯಿಷಾ ಬಿಂತ್ ಅಬೂಬಕರ್(ರ) ಮತ್ತು ಹಝ್ರತ್ ಉಮ್ ಸುಲೈಮ್(ರ) ಅವರನ್ನು ತಮ್ಮ ಬಟ್ಟೆಗಳನ್ನು ಬಿಗಿಯಾಗಿ ಕಟ್ಟಿಕೊಂಡಿದ್ದನ್ನು ನೋಡಿದೆ ಮತ್ತು ಅವರ ಕಾಲುಗಳ ಕಣಕಾಲುಗಳನ್ನು ನೋಡುತ್ತಿದ್ದೆ. ಇಬ್ಬರೂ ಚರ್ಮದ ಚೀಲದಲ್ಲಿ ನೀರನ್ನು ತುಂಬಿಸಿ ಬೇಗನೆ ಒಯ್ಯುತ್ತಿದ್ದರು. ಇದಲ್ಲದೆ ಬೇರೆಯವರು ಹೇಳಿದರು ಇನ್ನೊಂದು ವರದಿಯ ಪ್ರಕಾರ: ಅವರಿಬ್ಬರೂ ಚರ್ಮದ ಚೀಲಗಳನ್ನು ತಮ್ಮ ಸೊಂಟದ ಮೇಲಿರಿಸಿಕೊಂಡು ತಂದು ಬಾಯಾರಿದವರಿಗೆ ಕುಡಿಸುತ್ತಿದ್ದರು. ನಂತರ ಅವರಿಬ್ಬರೂ ಹಿಂತಿರುಗಿ ಅದನ್ನು ತುಂಬಿಕೊಂಡು ಬಂದು ಜನರಿಗೆ ಕುಡಿಸುತ್ತಿದ್ದರು. (ಸಹೀಹ್ ಬಿಖಾರಿ, ಕಿತಾಬುಲ್-ಜಿಹಾದ್, ಹದೀಸ್-2880)

ಹಝ್ರತ್ ಅಬು ಸಯೀದ್ ಖುದ್ರಿ(ರ) ಅವರ ತಾಯಿ ಉಮ್ಮ್ ಸಾಲಿತ್(ರ) ಕೂಡ ದೂರದಿಂದ ಚರ್ಮದ ಚೀಲಗಳಲ್ಲಿ ನೀರನ್ನು ತುಂಬಿಕೊಂಡು ಮತ್ತೊಂದು ಬದಿಯಲ್ಲಿ ಗಾಯಗೊಂಡವರಿಗೆ ಮತ್ತು ಬಾಯಾರಿದವರಿಗೆ ಕಿಡಿಸುತ್ತಿದ್ದರು. ಹಝ್ರತ್ ಉಮ್ಮ್ ಅತಿಯಾ(ರ) ಕೂಡ ಅದೇ ಸೇವೆಗಳನ್ನು ಮಾಡಿದರು, ಆದರೆ ಇತರ ಕೆಲವು ಮುಸ್ಲಿಂ ಮಹಿಳೆಯರು ನಿಯಮಿತವಾಗಿ ಈಟಿಗಳು ಮತ್ತು ಕತ್ತಿಗಳಿಂದ ಶತ್ರುಗಳ ವಿರುದ್ಧ ಹೋರಾಡುತ್ತಿದ್ದರು. ಅವರಲ್ಲಿ ವಿಶೇಷವಾಗಿ ಹಝ್ರತ್ ಉಮ್ಮು ಅಮ್ಮರಾ(ರ) ಆಗಿದ್ದರು, ನಾನು ಹಿಂದಿನ ಖುತ್‌ಬ ಜುಮುಅದಲ್ಲಿ ಹೇಳಿದಂತೆ, ಅವರು ಇಬ್ನ್ ಖಮಿಯಾನನ್ನು ಹಝ್ರತ್ ಪೈಗಂಬರ್(ಸ)ರ ಮೇಲೆ ದಾಳಿ ಮಾಡುವುದನ್ನು ಕಂಡಾಗ, ಬಹಳ ಶೌರ್ಯದಿಂದ ಆ ಅರಬ್‌ನ ಈ ಕುದುರೆಸವಾರನ ವಿರುದ್ಧ ಭಯವಿಲ್ಲದೆ ಹೋರಾಡಲು ನಿಂತರು ಮತ್ತು ಅವನ ಮೇಲೆ ಹಲವಾರು ದಾಳಿಗಳನ್ನು ಮಾಡಿ ಹಿಮ್ಮೆಟ್ಟುವಂತೆ ಮಾಡಿದರು. (ಗ಼ಝವಾತ್ ವ ಸರಾಯಾ, ಮುಹಮ್ಮದ್ ಅಝ್‌ಹರ್ ಫರೀದ್, ಪುಟ-198, ಫರಿದಿಯಾ ಪಬ್ಲಿಷರ್ಸ್ ಸಾಹಿವಾಲ್ 2018)

ಇಬ್ನ್ ಅಬಿ ಶೈಬಾ ಮತ್ತು ಇಮಾಮ್ ಅಹ್ಮದ್ ಬಿನ್ ಹಂಬಲ್ ಅವರು ಅಬ್ದುಲ್ಲಾ ಬಿನ್ ಮಸ್‌ಊದ್(ರ) ಅವರಿಂದ ವರದಿ ಮಾಡುತ್ತಾರೆ: ಉಹುದ್ ದಿನದಂದು ಮಹಿಳೆಯರು ಮುಸ್ಲಿಮರ ಹಿಂದೆ ಮುಶ್ರಿಕೀನರ ಗಾಯಗೊಂಡ ಜನರನ್ನು ವಧಿಸುತ್ತಿದ್ದರು. (ಸ಼ಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ-4, ಪುಟ-203, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 1993)

ಯುದ್ಧದ ನಂತರ ಕೆಲವು ಮಹಿಳೆ ಸಹಾಬಿಗಳು ಉಹದ್ ಕ್ಷೇತ್ರಕ್ಕೆ ಬಂದರು.

ಹೀಗೆ, ಮುಶ್ರಿಕೀನರು ಹೊರಟುಹೋದಾಗ, ಮಹಿಳೆಯರು ಸಹಾಬಿಗಳ ಬಳಿಗೆ ಬಂದರು, ಅವರಲ್ಲಿ ಹಝ್ರತ್ ಪೈಗಂಬರ್(ಸ) ಅವರ ಪುತ್ರಿ ಹಝ್ರತ್ ಫಾತಿಮಾ(ರ) ಕೂಡ ಇದ್ದರು. ಅವರು ಪೈಗಂಬರ್(ಸ) ರನ್ನು ಭೇಟಿಯಾದಾಗ, ಅವರು ಅವರಿಗೆ ಅಂಟಿಕೊಂಡರು ಮತ್ತು ಅವರ ಗಾಯಗಳನ್ನು ತೊಳೆದರು ಮತ್ತು ಅಲೀ(ರ) ಗುರಾಣಿಯ ಮೂಲಕ ನೀರು ಸುರಿಯುತ್ತಿದ್ದರು ಆದರೆ ರಕ್ತ ಬಹಳ ಹೆಚ್ಚು ಹರಿಯಿತು. ಹಜ್‌ರತ್ ಫಾತಿಮಾ(ರ)ರವರು ಚಾಪೆಯ ಒಂದು ಭಾಗವನ್ನು ಸುಟ್ಟು ಬೂದಿ ಮಾಡಿದರು ಮತ್ತು ಗಾಯವನ್ನು ಸೇರುವವರೆಗೆ ಅದನ್ನು ಗಾಯಕ್ಕೆ ಹಚ್ಚಿದರು ಮತ್ತು ರಕ್ತಸ್ರಾವ ನಿಲ್ಲಿತು. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ-4, ಪುಟಗಳು 210-209, ದಾರುಲ್-ಕುತುಬ್ ಇಲ್‌ಮೀಯಾ ಬೈರುತ್ 1993)

ಉಹುದ್ ಯುದ್ಧದ ಬಗ್ಗೆ ಮಾಹಿತಿ ಪಡೆಯಲು ಹಝ್ರ಼ತ್ ಆಯಿಶ(ರ) ಕೆಲವು ಮಹಿಳೆಯರ ಜೊತೆಗೆ ಮನೆಯಿಂದ ಹೊರಟರು. ಮಾರ್ಗದಲ್ಲಿ ಹಿಂದ್ ಬಿನ್ತ್ ಅಮ್ರ್(ರ)ರೊಂದಿಗೆ ಅವರ ಭೇಟಿ ಆಯಿತು. ಹಿಂದ್, ಅಬ್ದುಲ್ಲಾಹ್ ಬಿನ್ ಅಮ್ರ್(ರ) ಸಹೋದರಿ ಆಗಿದ್ದರು. ಅವರು ತನ್ನ ಒಂಟೆಯನ್ನು ಕೊಂಡುಹೋಗುತ್ತಿದ್ದರು. ಆ ಒಂಟೆಯ ಮೇಲೆ ಹಝ್ರ಼ತ್ ಹಿಂದ್(ರ)ರ ಪತಿ ಹಝ್ರತ್ ಅಮ್ರೊ ಬಿನ್ ಜಮೂಹ್(ರ), ಪುತ್ರ ಹಝ್ರತ್ ಖಲ್ಲಾದ್ ಬಿನ್ ಅಮ್ರೊ(ರ) ಮತ್ತು ಸಹೋದರ ಹಝ್ರತ್ ಅಬ್ದುಲ್ಲಾ ಬಿನ್ ಅಮ್ರೊ(ರ) ರ ಮೃತದೇಹಗಳಿದ್ದುವು. ಅವರೊಡನೆ ಹಝ್ರ಼ತ್ ಆಯಿಶ(ರ) ಯುದ್ಧ ಮೈದಾನದ ಅವಸ್ಥೆಯ ಬಗ್ಗೆ ಕೇಳಿದಾಗ ಹಝ್ರ಼ತ್ ಹಿಂದ್(ರ) ಹೀಗೆ ಉತ್ತರಿಸಿದರು: ರಸೂಲುಲ್ಲಾಹ್(ಸ) ಕ್ಷೇಮವಾಗಿದ್ದಾರೆ. ಅವರು ಇರುವಾಗ ಎಲ್ಲ ಕಷ್ಟತೆಗಳು ಸುಲಭವಾಗುತ್ತದೆ.

ಅವರು ತನ್ನ ಮೂರು ನಿಕಟ ಸಂಬಂಧಿಗಳಾದ ಪತಿ, ಪುತ್ರ ಮತ್ತು ಸಹೋದರರನ ಮೃತದೇಹಗಳನ್ನು ಕೊಂಡುಹೋಗುತ್ತಿದ್ದರು. ಆದರೆ ಅವರೊಡನೆ ಕೇಳಿದಾಗ ಹೀಗೆ ಹೇಳಿದರು: ಹಝ್ರ಼ತ್ ಪೈಗಂಬರ್(ಸ) ಕ್ಷೇಮವಾಗಿರುವುದಾದರೆ, ಎಲ್ಲವೂ ಕ್ಷೇಮ. ಈ ಮೃತದೇಹಗಳನ್ನು ನಾನು ಈಗ ದಫನ್ ಮಾಡುತ್ತೇನೆ. ಹಝ್ರ಼ತ್ ಪೈಗಂಬರ್(ಸ) ಕ್ಷೇಮವಾಗಿರುವಾಗ ಯಾವುದೇ ಚಿಂತೆಯಿಲ್ಲ. (ಕಿತಾಬುಲ್ ಮಘಾ಼ಝಿ, ಸಂಪುಟ-1, ಪಉಟ-232-233, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಉಮ್ಮು ಅಮಾರಾ(ರ) ಅವರು ವರದಿ ಮಾಡುತ್ತಾರೆ: ಉಹುದ್ ದಿನದಂದು ನಾನು ಜನರು ಏನು ಮಾಡುತ್ತಿದ್ದಾರೆಂದು ನೋಡಲು ಹೊರಟಿದೆ. ನಾನು ಹಝ್ರತ್ ಪೈಗಂಬರ್(ಸ) ಅವರನ್ನು ತಲುಪುವವರೆಗೆ ಗಾಯಾಳುಗಳಿಗೆ ನನ್ನೊಂದಿಗೆ ನೀರಿನೊಂದಿಗೆ ತುಂಬಿದ ನೀರಿನ ಚೀಲವಿತ್ತು. ಆ ಸಮಯದಲ್ಲಿ, ಹಝ್ರತ್ ಪೈಗಂಬರ್(ಸ) ಸಹಾಬಗಳ ಮಧ್ಯದಲ್ಲಿದ್ದರು ಮತ್ತು ಮುಸ್ಲಿಮರ ಸೈನ್ಯವು ವಿಜಯಶಾಲಿಯಾಗಿದ್ದರು ಅಷ್ಟರಲ್ಲಿ ಇದ್ದಕ್ಕಿದ್ದಂತೆ ಮುಸ್ಲಿಮರು ಸೋಲಲ್ಪಟ್ಟರು. ನಾನು ಬೇಗನೆ ಪೈಗಂಬರ್(ಸ)ರ ಬಳಿಗೆ ಬಂದು ಎದ್ದುನಿಂತು ಹೋರಾಡಲು ಪ್ರಾರಂಭಿಸಿದೆ. ನಾನು ಕತ್ತಿಯಿಂದ ಶತ್ರುಗಳು ಹಝ್ರತ್ ಪೈಗಂಬರ್(ಸ)ರ ಹತ್ತಿರ ಬರದಂತೆ ತಡೆಯುತ್ತಿದ್ದೆ. ಅದೇ ಸಮಯದಲ್ಲಿ, ನಾನು ಗಾಯಗೊಳ್ಳುವವರೆಗೂ ಬಿಲ್ಲುಗಳಿಂದ ಬಾಣಗಳನ್ನು ಹೊಡೆಯುತ್ತಿದ್ದೆ.

(ಸೀರತ್ ಅಲ್-ಹಲ್ಬಿಯಾಹ್, ಸಂಪುಟ-2, ಪುಟ-313, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಉಹುದ್ ಯುದ್ಧದಲ್ಲಿ ಹೋರಾಡಿ ಹಝ್ರತ್ ಪೈಗಂಬರ್(ಸ)ರನ್ನು ರಕ್ಷಿಸಲು ಧೈರ್ಯದಿಂದ ಬಾಣಗಳನ್ನು ಬೀಸಿದ ಮಹಿಳೆ ಹಝ್ರತ್ ಉಮ್ಮು ಉಮಾರಾ(ರ) ಉಮ್ ಅಮಾರಾ ನುಸೈಬಾ ಮಝಿನಿಯಾ ಆಗಿದ್ದರು ಎಂದು ಓರ್ವ ಜೀವನಚರಿತ್ರೆಕಾರರು ಹೇಳುತ್ತಾರೆ. (ಗ಼ಝ್ವಾ ಉಹುದ್, ಮುಹಮ್ಮದ್ ಅಹ್ಮದ್ ಬಾಶ್ಮಾಯಿಲ್, ಪುಟ-171, ನಫೀಸ್ ಅಕಾಡೆಮಿ ಕರಾಚಿ)

ನುಸೈಬಾ ಮಝಿನಿಯಾಹ್, ಅಂದರೆ, ಹಝ್ರತ್ ಉಮ್ಮು ಅಮಾರಾ(ರ) ಹೊರತುಪಡಿಸಿ ಯಾವುದೇ ಮಹಿಳೆಯ ಬಗ್ಗೆ ಅವರು ಉಹುದ್ ದಿನದಂದು ಯುದ್ಧದಲ್ಲಿ ಭಾಗವಹಿಸಿದ್ದರು ಎಂದು ಸಾಬೀತಾಗಿಲ್ಲ.

ಹೌದು, ಇತಿಹಾಸಕಾರರು ಅವಿಶ್ವಾಸಿಗಳು ಹೊರಟುಹೋದ ನಂತರ ಮುಸ್ಲಿಮರ ಕೆಲವು ಮಹಿಳೆಯರು ಮದೀನಾದಿಂದ ಯುದ್ಧದ ಮೈದಾನಕ್ಕೆ ಹೋದರು ಮತ್ತು ಅವರು ಗಾಯಾಳುಗಳಿಗೆ ಸಹಾಯ ಮಾಡುವಲ್ಲಿ ಮತ್ತು ನೀರು ಕೊಡುವಲ್ಲಿ ಭಾಗವಹಿಸಿದರು ಎಂದು ಹೇಳಿದ್ದಾರೆ. ಈ ಮಹಿಳೆಯರಲ್ಲಿ ಪೈಗಂಬರ್(ಸ) ಅವರ ಪತ್ನಿ ಹಝ್ರತ್ ಆಯಿಷಾ(ರ) ಮತ್ತು ಅವರ(ಸ) ಪುತ್ರಿ ಹಝ್ರತ್ ಫಾತಿಮಾ ಅಲ್-ಝುಹ್ರಾ(ರ) ಸೇರಿದ್ದಾರೆ. ಬುಖಾರಿಯ ಒಂದು ವರದಿಯ ಪ್ರಕಾರ ನಾನು ಹಝ್ರತ್ ಆಯಿಷಾ(ರ) ಮತ್ತು ಹಝ್ರತ್ ಉಮ್ಮು ಸುಲೈಮ್(ರ) ಅವರನ್ನು

ಕಂಡಿದ್ದೇನೆ ಎಂದು ವಿವರಿಸಿದ್ದಾರೆ. ಇವರಿಬ್ಬರೂ ಬೇಗಬೇಗನೆ ಬೆನ್ನು ಮೇಲೆ ನೀರಿನ ಚೀಲಗಳನ್ನು ಇರಿಸಿ ಜನರ ಬಾಯಲ್ಲಿ ನೀರು ಸುರಿಸುತ್ತಿದ್ದರು. ತದನಂತರ ಮತ್ತೆ ಬಂದು ಅದನ್ನು ತುಂಬಿಸುಕೊಂಡು ಬಂದು ಜನರ ಬಾಯಲ್ಲಿ ನೀರು ಸುರಿಸುತ್ತಿದ್ದರು. (ಗ್ಝ್ವಾ ಉಹುದ್, ಮುಹಮ್ಮದ್ ಅಹ್ಮದ್ ಬಾಶ್ಮಾಯಿಲ್, ಪುಟ–175, ನಫೀಸ್ ಅಕಾಡೆಮಿ ಕರಾಚಿ)

ಓರ್ವ ಬರಗಾರರು ಬರೆಯುತ್ತಾರೆ: ಘೋರ ಯುದ್ಧದ ಸಂದರ್ಭದಲ್ಲಿ ಕೆಲವು ಮುಸ್ಲಿಂ ಮಹಿಳೆಯರು ಪರಿಹಾರ ಕಾರ್ಯಾಚರಣೆಗೆ ಸಿದ್ಧರಾದರು. ಆ ಮಹಿಳೆಯರಲ್ಲಿ ಹಝ್ರತ್ ಪೈಗಂಬರ್(ಸ) ಅವರ ದಾಇಯಾ (ಸೂಲಗಿತ್ತಿ) ಹಝ್ರತ್ ಉಮ್ಮೆ ಐಮಾನ್(ರ) ಕೂಡ ಸೇರಿದ್ದರು. ಬರಹಗಾರರು ಹೇಳುತ್ತಾರೆ: ಮುಸ್ಲಿಮರ ಸೋತ ಪಕ್ಷವು ಮದೀನಾವನ್ನು ಪ್ರವೇಶಿಸಲು ಉದ್ದೇಶಿಸಿದಾಗ, ಹಝ್ರತ್ ಉಮ್ಮೆ ಐಮನ್(ರ), ಅವರನ್ನು ಭೇಟಿಯಾದರು ಮತ್ತು ಅವರ ಮುಷ್ಟಿಯಿಂದ ಅವರ ಮುಖದ ಮೇಲೆ ಧೂಳು ಎರಚಲು ಪ್ರಾರಂಭಿಸಿದರು ಮತ್ತು ಅವರಲ್ಲಿ ಕೆಲವರನ್ನು ಖಂಡಿಸಿ ಹೇಳಿದರು: ನಿಮಗೆ ಹೋರಾಡಲು ಸಾಧ್ಯವಾಗದಿದ್ದರೆ, ಈ ಕದರಣೆಗೆಯನ್ನು ತೆಗೆದುಕೊಳ್ಳಿ, ಅಂದರೆ ಮಹಿಳೆಯರು ನೂಲು ಬೀಸುವ ಕದರನು ತೆಗೆದುಕೊಳ್ಳಿ ಮತ್ತು ನಿಮ್ಮ ಖಡ್ಗಗಳನ್ನು ನಮಗೆ ನೀಡಿ ಅಂದರೆ ನಮಗೆ ಕತ್ತಿಗಳನ್ನು ನೀಡಿ ನಮ್ಮ ಮಹಿಳೆಯರ ಕೆಲಸವನ್ನು ನೀವು ಮಾಡಿರಿ. ತದನಂತರ, ಅವರು ಬೇಗನೆ ಯುದ್ಧಭೂಮಿಯನ್ನು ತಲುಪಿದರು. ಹಝ್ರತ್ ಉಮ್ಮೆ ಐಮನ್(ರ)ರವರು ಗಾಯಾಳುಗಳಿಗೆ ಸಹಾಯ ಮಾಡಲು ಸಿದ್ಧರಾಗುತ್ತಿದ್ದರು, ರಸೂಲುಲ್ಲಾಹ್(ಸ) ರವರ ಯುದ್ಧವು ವೇಗವಾಗಿ ನಡೆಯುತ್ತಿದ್ದಾಗ, ರಕ್ಷಣಾ ಕಾರ್ಯಾಚರಣೆಯ ಸಮಯದಲ್ಲಿ ಅವಿಶ್ವಾಸಿಗಳ ಬಾಣಗಳು ಆಕೆಗೆ ತಗುಲಿತು. ಇಬ್ನ್ ಅಸೀರ್ ಅವರ ಪುಸ್ತಕ ಅಲ್–ಕಾಮಿಲ್ ಫಿತ್ತಾರೀಖ್ ನಲ್ಲಿ, ಹಝ್ರತ್ ಉಮ್ಮೆ ಐಮನ್ ಸೈನ್ಯದಲ್ಲಿ ಗಾಯಗೊಂಡವರಿಗೆ ನೀರು ನೀಡುತ್ತಿದ್ದಾಗ ಹಿಬ್ಬನ್ ಬಿನ್ ಅರ್ಕಾ ಅವರನ್ನು ಬಾಣದಿಂದ ಹೊಡೆದಾಗ ಅವರು ಕೆಳಗೆ ಬಿದ್ದು ಬೆತ್ತಲೆಯಾದಳು, ಆದ್ದರಿಂದ ದೇವರ ಈ ಶತ್ರು ಅವರನ್ನು ನೋಡಿ ನಕ್ಕಿದನು. ಹಝ್ರತ್ ಪೈಗಂಬರ್(ಸ) ಅವರಿಗೆ ಈ ವಿಷಯ ಹಳ ದುಃಖ ನೀಡಿತು. ಆಗ ಹಝ್ರತ್ ಪೈಗಂಬರ್(ಸ) ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ)ರಿಗೆ ಒಂದು ಬಾಣವನ್ನು ಕೊಟ್ಟರು. ಅದಕ್ಕೆ ಮೊಣಚಾದ ತುದಿ ಇರಲಿಲ್ಲ. ಸಅದ್(ರ) ಅದನ್ನು ಚಲಾಯಿಸಿದರು. ಆ ಬಾಣ ಆ ಸತ್ಯನಿಷೇಧಿಗೆ ತಗುಲಿತು ಮತ್ತು ಅವನು ಹಿಂದಕ್ಕೆ ಬಿದ್ದುಬಿಟ್ಟನು. ಅದರಿಂದ ಅವನ ನಗ್ನತೆ ಪ್ರಕಟಗೊಂಡಿತು. ಆಗ ಹಝ್ರತ್ ಪೈಗಂಬರ್(ಸ) ಮುಗುಳ್ನಕ್ಕರು. ತುದಿ ಇಲ್ಲದ ಮತ್ತು ಒಂದು ಬಡಿಗೆಯಂತಿದ್ದ ಬಾಣದಿಂದ ಆ ಸತ್ಯನಿಷೇಧಿಯನ್ನು ಮಾರ್ಗದಿಂದ ನೀಗಿಸಿದ ಅಲ್ಲಾಹನ ಉಪಕಾರದ ಕಾರಣದಿಂದ ಹಝ್ರತ್ ಪೈಗಂಬರ್(ಸ) ಮುಗುಳ್ನಕ್ಕರು. ಅವರು(ಸ) ಹೇಳಿದರು: ಸಅದ್ ಉಮ್ಮೆ ಐಮನ್‌ನ ಸೇಡು ತೀರಿಸಿಕೊಂಡಿದ್ದಾನೆ.

ಓರ್ವ ಚರಿತ್ರೆಗಾರರು ಬರೆದಿದ್ದಾರೆ: ಯುದ್ಧದ ಕೊನೆಯಲ್ಲಿ, ಕೆಲವು ಮುಮಿನ್ ಮಹಿಳೆಯರು ಜಿಹಾದ್ ಕ್ಷೇತ್ರವನ್ನು ತಲುಪಿದರು. ಹೀಗಾಗಿ, ಮುಸ್ಲಿಮರು ವಿಜಯದ ಚಿಹ್ನೆಗಳನ್ನು ನೋಡಲಾರಂಭಿಸಿ ಅವಿಶ್ವಾಸಿಗಳನ್ನು ಬೆನ್ನಟ್ಟಲು ಪ್ರಾರಂಭಿಸಿದಾಗ ಈ ಜಲೀಲ್–ಉಲ್–ಖದರ್ (ಧೈರ್ಯಶಾಲಿ) ಮಹಿಳೆಯರು ಯುದ್ಧಭೂಮಿಗೆ ತಲುಪಿದ್ದರು. ಎಂದು ಜೀವನಚರಿತ್ರೆಕಾರರು ಬರೆದಿದ್ದಾರೆ. (ಗ್ಝ್ವ ಉಹುದ್, ಮುಹಮ್ಮದ್ ಅಹ್ಮದ್ ಬಾಶ್ಮಾಯಿಲ್, ಪುಟ 177–176, ನಫೀಸ್ ಅಕಾಡೆಮಿ ಕರಾಚಿ) (ಅಲ್–ರಾಹೀಕ್ ಅಲ್–ಮಖ್ತೂಮ್, ಅನುವಾದಕ, ಪುಟ–377, ಅಲ್–ಮುಕ್ತಬ್ ಅಲ್–ಸಲಫಿಯಾ ಲಾಹೋರ್) (ಎನ್‌ಸೈಕ್ಲೋಪೀಡಿಯಾ ಆಫ್ ಬಯೋಗ್ರಫಿ, ಸಂಪುಟ–393, ಪುಟ–393, ಮಕ್ತಬ ದಾರುಸ್ಸಲಾಮ್ ರಿಯಾದ್)

ಸಂಕ್ಷಿಪ್ತವಾಗಿ ಹೇಳುವುದಾದರೆ, ಆ ಸಮಯದಲ್ಲಿ ಮುಸ್ಲಿಂ ಮಹಿಳೆಯರು ಉಹುದ್ ಮೈದಾನಕ್ಕೆ ಹೋಗಿರಬೇಕು. ಇವು ಸಾಧ್ಯತೆಗಳಿವೆ. ಅವರು ಮುಸ್ಲಿಂ ಸೇನೆಯ ಸಾಮಾನ್ಯ ಸದಸ್ಯೆಯಾಗಿರಲಿಲ್ಲ. ಮೊದಲನೇಯದಾಗಿ, ಮುಸಲ್ಮಾನರ ಆರಂಭಿಕ ವಿಜಯದ ಸುದ್ದಿ ಮದೀನಾಗೆ ತಲುಪಿದಾಗ, ಅವರು ಈ ಸುದ್ದಿಯನ್ನು ಕೇಳಿ ಉಹದ್‌ಗೆ ಬಂದಿರಬೇಕು, ಆದರೆ ಅಷ್ಟರೊಳಗೆ ಯುದ್ಧದ ನಕ್ಷೆಯೇ ಬದಲಾಗಿತ್ತು. ಹಾಗಾಗಿ ಮುಸ್ಲಿಂ ಮಹಿಳೆಯರೂ ರಣರಂಗದಲ್ಲಿ ಪಾಲ್ಗೊಂಡಿದ್ದರು.

ಎರಡನೆಯದಾಗಿ, ಹಝ್ರತ್ ಪೈಗಂಬರ್(ಸ)ರು ಶಹೀದ್ ಆದರು ಎಂಬ ಸುದ್ದಿ ಕೇಳಿ ಬಂದಾಗ, ಈ ಮಹಿಳೆಯರು ಚಂಚಲರಾಗಿ ಉಹುದ್ ಕಡೆಗೆ ತೆರಳಿರಬಹುದು ಮತ್ತು ನಂತರ ಅವರು ಈ ಯುದ್ಧದ ಕೊನೆಯ ಹಂತದಲ್ಲಿ ಸೇರಿರಬಹುದು ಎಂದು ಊಹಿಸಲಾಗಿದೆ. ಒಂದು ಕಡೆ ರಕ್ಷಣಾತ್ಮಕ ದಾಳಿ ನಡೆಯುತ್ತಿದ್ದರೆ ಇನ್ನೊಂದು ಕಡೆ ಗಾಯಾಳುಗಳಿಗೆ ಚಿಕಿತ್ಸೆ ಶುರುವಾಯಿತು. ಆದಾಗ್ಯೂ, ಅಲ್ಲಾಹನ ಬಲ್ಲವನಾಗಿದ್ದಾನೆ.

ಉಹುದ್ ಯುದ್ಧದ ಘಟನೆಯನ್ನು ವಿವರಿಸುತ್ತಾ, ಹಝ್ರತ್ ಸಅದ್(ರ) ಹೇಳುತ್ತಾರೆ: ಉಹುದ್ ದಿನದಂದು ಹಝ್ರತ್ ಪೈಗಂಬರ್(ಸ)ರವರು ತನಗಾಗಿ ತನ್ನ ಹೆತ್ತವರನ್ನು ಒಟ್ಟುಗೂಡಿಸಿದರು. ಅವರು ಹೇಳಿದರು: ಸತ್ಯನಿಷೇಧಿಗಳಲ್ಲಿ ಒಬ್ಬನು ಮುಸ್ಲಿಮರಲ್ಲಿ ಬೆಂಕಿ ಹಚ್ಚಿದವನಾಗಿದ್ದನು. ಹಝ್ರತ್ ಪೈಗಂಬರ್(ಸ) ಅವರಿಗೆ ಅಂದರೆ ಹಝ್ರತ್ ಸಅದ್(ರ) ಅವರಿಗೆ ಬಾಣಗಳನ್ನು ನೀಡಿ ನನ್ನ ತಂದೆ ತಾಯಿ ನಿನಗಾಗಿ ಅರ್ಪಿತವಾಗಲಿ ಎಂದು ಹೇಳಿದರು. ಅಂದರೆ, ತಂದೆ ತಾಯಿಯನ್ನು ಒಟ್ಟುಗೂಡಿಸಿದರು. ಇದರ ಅರ್ಥವೇನೆಂದರೆ, ನನ್ನ ತಂದೆತಾಯಿಯವರು ನಿನಗಾಗಿ ತ್ಯಾಗವಾಡಿದ್ದಾರೆ ಎಂದು ಅವರು ಹೇಳಿದರು, ಹಝ್ರತ್ ಸಅದ್ ಹೇಳಿದರು: ನಾನು ಅವರ ಬದಿಯಲ್ಲಿ ಮೊಣಚಾದ ತುದಿ ಇಲ್ಲದ ಬಾಣವನ್ನು ಹೊಡೆದಿದ್ದೇನೆ, ಇದರಿಂದಾಗಿ ಅವನು ಮರಣ ಹೊಂಸಿದನು ಮತ್ತು ಅವನ ನಗ್ನತೆ ಪ್ರಕಟಗೊಂಡಿತು. ಹಝ್ರತ್ ಪೈಗಂಬರ್(ಸ)ರು ಅವನನ್ನು ನೋಡಿ ಮುಗುಳ್ನಗೆನಕ್ಕಿದ್ದನ್ನು ನಾನು ನೋಡಿದೆ. (ಸಹೀಹ್ ಮುಸ್ಲಿಂ, ಕಿತಾಬ್ ಫಝಾಎಲ್ ಅಲ್–ಸಹಾಬಾ, ಹದೀಸ್–6237)

ಇನ್ನೊಂದು ವರದಿಯಲ್ಲಿ ಈ ಘಟನೆಯನ್ನು ಹೀಗೆ ವಿವರಿಸಲಾಗಿದೆ, ಕೆಲವು ಇತಿಹಾಸ ಪುಸ್ತಕಗಳಲ್ಲಿ ಹಿಬ್ಬಾನ್ ಎಂದು ಹೆಸರಿಸಲಾದ ಈ ಸತ್ಯವಿಷೇಧಿಯು, ಗಾಯಗೊಂಡವರಿಗೆ ನೀರು ಕೊಡುವಲ್ಲಿ ನಿರತರಾಗಿದ್ದ ಹಝ್ರತ್ ಉಮ್ಮ ಐಮನ್(ರ) ಅವರ ದೇಹಕ್ಕೆ ಬಾಣವನ್ನು ಹೊಡೆದನು. ಇದನ್ನು ಕಂಡು ಹಿಬ್ಬಾನ್ ನಗುತ್ತಿದ್ದನು. ಹಝ್ರತ್ ಪೈಗಂಬರ್(ಸ) ರವರು ಹಝ್ರತ್ ಸಅದ್(ರ) ಅವರಿಗೆ ಬಾಣವನ್ನು ನೀಡಿದರು. ಆ ಬಾಣವು ಹಿಬ್ಬಾನ್‌ನ ಗಂಟಲಿಗೆ ತಗುಲಿತು ಹೀಗೆ ಅವನು ಹಿಂದಕ್ಕೆ ಬಿದ್ದಿದ್ದರಿಂದ ಅವನ ನಗ್ನತೆಯು ಬಹಿರಂಗವಾಯಿತು. ಹಝ್ರತ್ ಪೈಗಂಬರ್(ಸ)ರವರು ಇದನ್ನು ಕಂಡು ಮುಗುಳ್ನಕ್ಕರು.
(ಅಲ್–ಅಸಾಬಾ, ಸಂಪುಟ–3, ಪುಟ–64, ಪ್ರಕಾಶಕರು ದಾರುಲ್ ಕುತುಬ್ ಇಲ್ಮಿಯಾ ಬೈರುತ್ 1995)

ವಾಸ್ತವವಾಗಿ, ಹಝ್ರತ್ ಪೈಗಂಬರ್(ಸ) ಅವರ ಈ ಸಂತೋಷ ಮತ್ತು ಮುಗುಳ್ನಗೆಯು ಅಲ್ಲಾಹನ ಕೃಪೆಯಿಂದಾಗಿ ಸಂಭವಿಸಿತು, ಅವನು ಮೊಣಚಾದ ತುದಿ ಇಲ್ಲದ ಬಾಣದಿಂದ ಒಬ್ಬ ಅಪಾಯಕಾರಿ ಶತ್ರುವನ್ನು ದಾರಿಯಿಂದ ಮುಗಿಸಿದನು. (ಸಹೀಹ್ ಮುಸ್ಲಿಮ್, ಸಂಪುಟ–13, ಪುಟ–41 ಅಡಿಟಿಪ್ಪಣಿ, ನೂರ್ ಫೌಂಡೇಶನ್) ಒಂದು ನೇರವಾದ ಕೊಲಿನ ರೀತಿಯಲ್ಲಿತ್ತು ಅದು ಅವನನ್ನು ಕೊಂದಿತು.

ಒಬ್ಬ ಲೇಖಕ ಹಝ್ರತ್ ಪೈಗಂಬರ್(ಸ)ರ ಧೈರ್ಯ ಮತ್ತು ತೀಕ್ಷ್ಣಬುದ್ಧಿಯ ಬಗ್ಗೆ ಪ್ರಸ್ತಾಪಿಸುತ್ತಾ ಬರೆಯುತ್ತಾರೆ: ಖಾಲಿದ್ ಬಿನ್ ವಲೀದ್‌ರ ನೇತೃತ್ವದಲ್ಲಿ ಖುರೈಶಿ ಕುದುರೆಸವಾರರು ಅಬ್ದುಲ್ಲಾಹ್ ಬಿನ್ ಜುಬೈರ್(ರ) ಮತ್ತು ಅವರ ಸಂಗಡಿಗರನ್ನು ಶಹೀದ್ ಮಾಡುತ್ತಾ ಇಸ್ಲಾಮಿನ ಸೇನೆಯ ಹಿಂದೆ ಬಂದಾಗ, ಪರೀಕ್ಷಣೆಯ ಈ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಬುದ್ಧಿ ಮತ್ತು ಅತುಲ್ಯವಾದ ಧೈರ್ಯ ಪ್ರಕಟಗೊಂಡಿತು. ಏಕೆಂದರೆ ಹಝ್ರತ್ ಪೈಗಂಬರ್(ಸ) ತನ್ನ ಜೀವವನ್ನು ಅಪಾಯದಲ್ಲಿರಿಸಿ ಸಹಾಬಿಯರ ಜೀವಗಳನ್ನು ಸಂರಕ್ಷಿಸಲು ತೀರ್ಮಾನಿಸಿದರು. ಅವರು ಅತ್ಯಂತ ಉಚ್ಚ ಸ್ವರದಲ್ಲಿ ಸಹಾಬಿಯರನ್ನು ಹೀಗೆ ಕರೆದರು: ಹೇ ಅಲ್ಲಾಹನ ದಾಸರೇ, ಇಲ್ಲಿಗೆ ಬನ್ನಿರಿ. ಹಝ್ರತ್ ಪೈಗಂಬರ್‌ರ(ಸ) ಶಬ್ದ ಪೂರ್ತಿ ಮೈದಾನದಲ್ಲಿ ಪ್ರತಿಧ್ವನಿಸಿತ್ತು. ಸಹಾಬಿಯರಿಗೂ ಅವಸ್ಥೆಯ ಸೂಕ್ಷ್ಮತೆಯ ಅರಿವಾಗಿತ್ತು. ಅವರು ಬಹಳ ದೂರದಲ್ಲಿದ್ದರು. ಆದ್ದರಿಂದ ಅವರು ಬರುವುದಕ್ಕೆ ಮುಂಚಿತವಾಗಿ ಖುರೈಶೀ ಕುದುರೆಸವಾರರ ಒಂದು ಸಂಘ ಹಝ್ರತ್ ಪೈಗಂಬರ್(ಸ)ರ ಮೇಲೆ ದಾಳಿ ನಡೆಸಿತು. ಇತರ ಕುದುರೆಸವಾರರು ವೇಗವಾಗಿ ಮುಸ್ಲಿಮರನ್ನು ಸುತ್ತುವರೆಯಲು ಆರಂಭಿಸಿದರು. (ಘಝ್ವಾತ್ ವ ಸರಾಯಾ, ಪುಟ–183–184, ಫರೀದಿಯಾ ಪ್ರಿಂಟಿಂಗ್ ಪ್ರೆಸ್ ಸಾಹೀವಾಲ್)

ಗಾಯಾಳು ಆಗಿದ್ದ ಸ್ಥಿತಿಯಲ್ಲೂ ಹಝ್ರತ್ ಪೈಗಂಬರ್(ಸ) ಪ್ರಜ್ಞಾವಂತರಾಗಿದ್ದ ಬಗ್ಗೆ ಮತ್ತು ಸಹಾಬಿಯರಿಗೆ ಮಾರ್ಗದರ್ಶನ ಹಾಗೂ ಧೈರ್ಯ ನೀಡಿದ್ದ ಬಗ್ಗೆಯೂ ಪ್ರಸ್ತಾಪವಿದೆ. ಉತ್ಬ ಬಿನ್ ಅಬೀ ವಖಾಸ್ ಹಝ್ರತ್ ಪೈಗಂಬರ್(ಸ)ರ ಮೇಲೆ ಒಂದು ಕಲ್ಲನ್ನು ಎಸೆದನು. ಅದು ಹಝ್ರತ್ ಪೈಗಂಬರ್(ಸ)ರ ಮುಖಕ್ಕೆ ತಗುಲಿತು ಮತ್ತು ಅವರ ಮುಂದಿನ ಎರಡು ಹಲ್ಲುಗಳು ಮತ್ತು ಚೂಪಾದ ಹಲ್ಲಿನ ನಡುವೆ ಇರುವ ಹಲ್ಲು ಮುರಿದು ಹೋಯಿತು. ಅದರೊಂದಿಗೆ ಕೆಳಗಿನ ತುಟಿ ಕೂಡ ಮುರಿದು ಹೋಯಿತು. ಅಲ್ಲಾಮಾ ಹಜರ್ ಅಸ್ಕಲಾನಿ(ರಹ್) ವಿವರಿಸುತ್ತಾರೆ ಹಲ್ಲಿನ ಒಂದು ಭಾಗ ಮಾತ್ರ ಮುರಿದಿತ್ತು ಸಂಪೂರ್ಣ ಹಲ್ಲು ಕಿತ್ತು ಹೋಗಿರಲಿಲ್ಲ.

(ಫತಹ್ ಅಲ್‌ಬಾರಿ, ಸಂಪುಟ–7, ಪುಟ–464, ಹದೀಸ್–4070 ಖದೀಮಿ ಕುತುಬ್ ಖಾನ ಕರಾಚಿ)

ಆದಾಗ್ಯೂ ಉತ್ಬ ಬಿನ್ ಅಬೀ ವಖಾಸ್‌ನ ವಿರುದ್ಧವಾಗಿ ಹರ್ಝ್‌ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಲಾ ಯಹೂಲು ಅಲೈಹಿಲ್‌ಹೌಲು ಹತ್ತಾ ಯಮೂತ ಕಾಫಿರನ್**. ಅಂದರೆ: ಹೇ ಅಲ್ಲಾಹ್, ಒಂದು ವರ್ಷ ತುಂಬುವ ಮುಂಚಿತವಾಗಿ ಇವನನ್ನು ಸತ್ಯನಿಷೇಧಿಯಾಗಿ ಮೃತಪಡಿಸು. ಅಲ್ಲಾಹನು ಹರ್ಝ್‌ರತ್ ಪೈಗಂಬರ್(ಸ)ರ ಪ್ರಾರ್ಥನೆಯನ್ನು ಸ್ವೀಕಾರ ಮಾಡಿದನು. ಆತನನ್ನು ಅದೇ ದಿವಸ ಹಾತಿಬ್ ಬಿನ್ ಅಬೀ ಬಲ್‌ತಅ(ರ) ವಧಿಸಿದರು. ಹರ್ಝ್‌ರತ್ ಹಾತಿಬ್(ರ) ಹೇಳುತ್ತಾರೆ: ನಾನು ಉತ್ಬಾ ಬಿನ್ ಅಬಿ ವಕ್ಕಾಸ್‌ನ ಈ ನಾಚಿಕೆಗೇಡಿನ ದಿಟ್ಟತನವನ್ನು ಕಂಡಾಗ, ನಾನು ತಕ್ಷಣವೇ ಹರ್ಝ್‌ರತ್ ಪೈಗಂಬರ್(ಸ) ರನ್ನು ಉತ್ಬಾ ಯಾವ ಕಡೆಗೆ ಹೋಗಿದ್ದಾನೆ ಎಂದು ಕೇಳಿದೆ. ಅದಕ್ಕೆ ಹರ್ಝ್‌ರತ್ ಪೈಗಂಬರ್(ಸ)ರವರು ಅವನು ಹೋದ ದಿಕ್ಕಿನ ಕಡೆಗೆ ಸೂಚಿಸಿದರು. ನಾನು ತಕ್ಷಣ ಅವನನ್ನು ಹಿಂಬಾಲಿಸಲು ಹೊರಟೆ. ಒಂದೇ ಸ್ಥಳದಲ್ಲಿ ನಾನು ಅವನನ್ನು ಪಡೆಯುವಲ್ಲಿ ಯಶಸ್ವಿಯಾದಾಗ ಅವನನ್ನು ನಾನು ತಕ್ಷಣ ಕತ್ತಿಯಿಂದ ಹೊಡೆದಾಗ ಅವನ ಕುತ್ತಿಗೆಯುನ್ನು ಕತ್ತರಿಸಿ ಹಾರಿಹೋಯಿತು. ನಾನು ಅವನ ಕತ್ತಿ ಮತ್ತು ಕುದುರೆಯುನ್ನು ಸ್ವಾಧೀನಪಡಿಸಿಕೊಂಡು ಅದನ್ನು ಹರ್ಝ್‌ರತ್ ಪೈಗಂಬರ್(ಸ)ರ ಬಳಿಗೆ ತಂದೆ. ಈ ಸುದ್ದಿ ಕೇಳಿದ ಅವರು(ಸ) ಎರಡು ಬಾರಿ ಹೇಳಿದರು. **ರಝಿಯಲ್ಲಾಹು ಅನ್‌ಕ. ಅಝಿಯಲ್ಲಾಹು ಅನ್‌ಕ** ಅಂದರೆ: ಅಲ್ಲಾಹನು ನಿಮ್ಮ ಬಗ್ಗೆ ಸಂತುಷ್ಟನಾಗಿದ್ದಾನೆ. ಅಲ್ಲಾಹನು ನಿಮ್ಮ ಬಗ್ಗೆ ಸಂತಸಗೊಂಡಿದ್ದಾನೆ. (ಸೀರತ್ ಅಲ್-ಹಲ್ಬಿಯಾಹ್, ಸಂಪುಟ-2, ಪುಟ-317, ದಾರುಲ್-ಕುತುಬ್ ಅಲ್-ಇಲ್ಮೀಯಾ, ಬೈರುತ್)

ಉಹುದ್ ಯುದ್ಧದ ಸಂದರ್ಭದಲ್ಲಿ, ಹರ್ಝ್‌ರತ್ ಉಮ್ಮೆ ಅಮ್ಮಾರ(ರ) ಅಂದರೆ ನುಸೈಬಾ(ರ.ಅ) ಅವರ ಪತಿ ಹರ್ಝ್‌ರತ್ ಝೈದ್ ಬಿನ್ ಆಸಿಮ್ (ರ.ಅ) ಮತ್ತು ಅವರ ಇಬ್ಬರು ಮಕ್ಕಳಾದ ಖುಬೈಬ್(ರ.ಅ) ಮತ್ತು ಅಬ್ದುಲ್ಲಾ(ರ.ಅ) ಎಲ್ಲರೂ ಯುದ್ಧಕ್ಕೆ ಹೋಗಿದ್ದರು. ನಾನು ಅದನ್ನು ಮೊದಲೇ ಪ್ರಸ್ತಾಪಿಸಿದ್ದೆ ಮತ್ತು ಹರ್ಝ್‌ರತ್ ಪೈಗಂಬರ್(ಸ) ಅವರೆಲ್ಲರಿಗೂ ಅಲ್ಲಾಹನು ನಿಮ್ಮ ಕುಟುಂಬದ ಮೇಲೆ ತನ್ನ ಅನುಗ್ರಹವನ್ನು ನೀಡಲಿ ಎಂದು ಹೇಳಿದರು. ಒಂದು ವರದಿಯ ಪ್ರಕಾರ ಸರ್ವಶಕ್ತನಾದ ಅಲ್ಲಾಹನು ನಿಮ್ಮ ಕುಟುಂಬವನ್ನು ಅನುಗ್ರಹಿಸಲಿ ಎಂದಿದೆ. ಅದಕ್ಕೆ, ಹರ್ಝ್‌ರತ್ ಉಮ್ಮೆ ಅಮ್ಮಾರ(ರ) ಹರ್ಝ್‌ರತ್ ಪೈಗಂಬರ್(ಸ) ಅವರಿಗೆ ಹೇಳಿದರು: ನಾವು ನಿಮ್ಮೊಂದಿಗೆ ಸ್ವರ್ಗದಲ್ಲಿರಲು ಅಲ್ಲಾಹನಲ್ಲಿ ನಮಗಾಗಿ ದುಆ ಮಾಡಿರಿ. ಹರ್ಝ್‌ರತ್ ಪೈಗಂಬರ್(ಸ) ಅದೇ ರೀತಿ ದುಆ ಮಾಡಿದರು ಮತ್ತು ಹೇಳಿದರು: ಓ ಅಲ್ಲಾಹನೇ! ಅವರನ್ನು ಸ್ವರ್ಗದಲ್ಲಿ ನನ್ನ ಸ್ನೇಹಿತ ಮತ್ತು ಸಂಗಡಿಗರನ್ನಾಗಿ ಮಾಡು. ಅದೇ ಸಮಯದಲ್ಲಿ ಹರ್ಝ್‌ರತ್ ಉಮ್ಮೆ ಅಮ್ಮಾರಾ ಹೇಳಿದರು, ಜಗತ್ತಿನಲ್ಲಿ ನನಗೆ ಏನಾಗುತ್ತದೆ ಎಂದು ನಾನು ಹೆದರುವುದಿಲ್ಲ. (ಸೀರತ್ ಅಲ್-ಹಲ್ಬಿಯಾಹ್, ಸಂಪುಟ-2, ಪುಟ-314, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಇದು ಆ ಪ್ರಾಮಾಣಿಕ ಮಹಿಳೆ ಸಹಾಬಿಯರ ಧೈರ್ಯವಾಗಿತ್ತು ಮತ್ತು ಹರ್ಝ್‌ರತ್ ಪೈಗಂಬರ್(ಸ) ಅವರೊಂದಿಗೆ ಇದ್ದ ಪ್ರೀತಿ ಮತ್ತು ಪ್ರಾಮಾಣಿಕತೆಗೆ ಉದಾಹರಣೆಯಾಗಿತ್ತು. ಮತ್ತು ಅಲ್ಲಾಹನ ಸಂತೃಪ್ತಿಯನ್ನು ಗಳಿಸುವುದಕ್ಕೆ ಮತ್ತು ಅವನ ಧರ್ಮಕ್ಕಾಗಿ ತ್ಯಾಗ ಮಾಡುವುದಕ್ಕೆ ಲೌಕಿಕತೆಯು ಹೇಯ ವಿಷಯವಾಗಿತ್ತು.

ಉಳಿದದ್ದನ್ನು ನಾನು ನಂತರ ವಿವರಿಸುತ್ತೇನೆ, ಇನ್‌ಶಾಅಲ್ಲಾಹ್, ಪ್ರಾರ್ಥನೆಯ ನಂತರ, ಕೆಲವು ದಿವಂಗತರ ನಮಾಝ್ ಜನಾಝ್‌ಗಳೂ ಇವೆ. ನಾನು ಅವರನ್ನೂ ಉಲ್ಲೇಖಿಸುತ್ತೇನೆ.

ಮೊದಲ ಉಲ್ಲೇಖವು ಮುಕರ್‌ರಮ್ ಘಸ್ಸಾನ್ ಖಾಲಿದ್ ಅನ್ನಖೀಬ್ ಅವರದ್ದಾಗಿದೆ. ಅವರು ಸಿರಿಯಾದವರಾಗಿದ್ದರು. ಅವರು ಇತ್ತೀಚೆಗೆ ತಮ್ಮ 78 ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಮೂಸಿಯಾಗಿದ್ದರು. ಪತ್ನಿಯಲ್ಲದೆ ಓರ್ವ ಪುತ್ರ ಹಾಗೂ ಓರ್ವ ಪುತ್ರಿಯನ್ನು ಅವರು ಅಗಲಿದ್ದಾರೆ. ಹರ್ಝ್‌ರತ್ ಖಲೀಫತುಲ್ ಮಸೀಹ್ ರಾಬಿ(ರಹ್)ರವರ ಕಾಲಘಟ್ಟದಲ್ಲಿ ಸ್ವತಃ ಬೈಅತ್ ಮಾಡಿದ್ದರು. ತದನಂತರ ಅವರ ತಬ್ಲೀಗ್‌ನಿಂದಾಗ ಅವರ ಪುತ್ರನೂ ಬೈಅತ್ ಮಾಡಿದರು. ಪುತ್ರಿ ಮತ್ತು ಪತ್ನಿ ಇನ್ನೂ ಬೈಅತ್ ಮಾಡಲಿಲ್ಲ.

ದಿವಂಗತರ ಪುತ್ರ ಹುಸ್ಸಾಮ್ ಅನ್ನಖೀಬ್ ಬರೆಯುತ್ತಾರೆ: ನನ್ನ ತಂದೆ ನನ್ನ ಸ್ನೇಹಿತ ಮತ್ತು ಸಂಗಡಿಗರಾಗಿದ್ದರು. ಅವರು ನನಗೆ ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬೈಅತ್ ಮಾಡಲು ಮಾರ್ಗದರ್ಶನ ನೀಡಿದ್ದರು. ತೊಂಬತ್ತರ ದಶಕದಲ್ಲಿ, ನನ್ನ ತಂದೆ ಹರ್ಝ್‌ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ರ ಕಾರ್ಯಕ್ರಮ 'ಲಿಖಾ ಮಾಅಲ್ ಅರಬ್' ಮೂಲಕ ಜಮಾತ್‌ಗೆ ಪರಿಚಯಿಸಲ್ಪಟ್ಟರು. ಅದಕ್ಕೂ ಮೊದಲು ನಮ್ಮ ತಂದೆ ಧರ್ಮ ಎಂದರೆ ಕೇವಲ ಉತ್ತಮ ನಡವಳಿಕೆ ಹೊಂದುವುದು ಎಂಬ ಏಕೈಕ ದೃಷ್ಟಿಕೋನವನ್ನು ಹೊಂದಿದ್ದರು ಆದರೆ ಅವರು **"ಲಿಖಾ ಮಾಅಲ್ ಅರ್"** ಕಾರ್ಯಕ್ರಮವನ್ನು ನೋಡಿದಾಗ ಅವರು ಹೇಳಿದರು ಇಡೀ ಪ್ರಪಂಚದಲ್ಲಿ ಧರ್ಮದ ಉತ್ತಮ ಪಂಡಿತರು ಯಾರಾದರು ಇದ್ದರೆ ಅವರು ಈ ವ್ಯಕ್ತಿಯೇ ಆಗಿದ್ದಾರೆ ಅಂದರೆ ಹರ್ಝ್‌ರತ್ ಖಲೀಫತು;ಲ್ ಮಸೀಹ್ ರಾಬಿ(ರಹ್), ಮತ್ತು ನಿಜವಾದ ಇಸ್ಲಾಂ ಧರ್ಮ ಇದ್ದರೆ ಅದು ಇಲ್ಲಿದೆ. ಆಗ ನಮ್ಮ ತಂದೆಯವರಿಗೆ ಸುಮಾರು ಐವತ್ತು ವರ್ಷ ಪ್ರಾಯವಾಗಿತ್ತು. ಆ ಸಮಯದಲ್ಲಿ, ಅವರು ನಮಾಝ್ ನಿರ್ವಹಿಸಲು ಕಲಿತರು ಏಕೆಂದರೆ ಅವರು ಅದಕ್ಕು ಮೊದಲು ಅವರು ಎಂದಿಗೂ ನಮಾಝ್ ನಿರ್ವಹಿಸಿರಲಿಲ್ಲ ಮತ್ತು ನಂತರ ಅವರು ತಹಜ್ಜುದ್ ನಮಾಝ್ ಅನ್ನು ಬಿಟ್ಟುಹೋದ ನೆನಪಿಲ್ಲ ಎಂದು ಅವರು ಅದರಲ್ಲಿ ಭಕ್ತಿ ಹೊಂದಿದ್ದರು. ಅವರು ಹೇಳುತ್ತಾರೆ: 2003 ರಲ್ಲಿ ತಂದೆ ಬೈಅತ್ ಮಾಡಿದರು, ನಂತರ ಒಂದು ತಿಂಗಳ ನಂತರ ಅವರು ನನಗೂ ಮನವರಿಕೆ ಮಾಡಿಸಿದರು. ನಂತರ ಅವರು ಹರ್ಝ್‌ರತ್ ಖಲೀಫತುಲ್ ಮಸೀಹ್ ರಾಬಿ(ರಹ್)ರವರ ಜೀವಿತದ ಅಂತಿಮ ದಿನಗಳ ವಿಷಯವಾಗಿದೆ, ಅವರ ತಂದೆ ಅಬ್ದುಲ್ ಹೈ ಭಟ್ಟಿ ಸಾಹಿಬ್ ಮುರಬ್ಬಿ ಸಿಲ್‌ಸಿಲಾ ಅವರ ಮೂಲಕ ನಿಜಾಮ್-ಎ-ವಸಿಯ್ಯತ್ ಬಗ್ಗೆ ಕೇಳಿದಾಗ, ಅವರು ತಕ್ಷಣವೇ ನಿಜಾಮ್-ಎ-ವಸಿಯ್ಯತ್‌ನಲ್ಲಿ ಸೇರಿದರು. ಆ ಸಮಯದಲ್ಲಿ, ಅವರಿಗೆ ಮೊದಲು ಅಲ್-ವಸಿಯ್ಯತ್ ಪುಸ್ತಕವನ್ನು ಓದಲು ಹೇಳಿದಾಗ ಅವರು ಹೇಳಿದರು: ನಾನು ಖಂಡಿತಾವಾಗಿಯು ಓದಿ ಅದನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತೇನೆ, ಆದರೆ ವ್ಯವಸ್ಥೆಯ ಮೇಲಿನ ನನ್ನ ಪ್ರೀತಿ ಮತ್ತು ಅದರೊಂದಿಗೆ ಸಂಬಂಧ ಹೊಂದುವ ನನ್ನ ಉತ್ಸಾಹವನ್ನು ಬದಲಾಯಿಸುವುದಿಲ್ಲ, ಆದರೆ ಅದರ ಅಧ್ಯಯನವು ನನ್ನನ್ನು ಹೆಚ್ಚು ನಂಬುವಂತೆ ಮಾಡುತ್ತದೆ. ಇದು ಸರಿಯಾಗಿದೆ ಎಂದು ನನಗೆ ಮೊದಲೇ ಖಾತರಿ ಇದೆ. ತಂದೆಯವರು ಜಮಾಅತ್ ಗೆ ಪರಿಚಯವಾದಾಗಿನಿಂದಲೂ ಜಮಾಅತ್ ಸಾಹಿತ್ಯದಲ್ಲಿ ಸಿಕ್ಕಿದ್ದನ್ನೆಲ್ಲ ಅಧ್ಯಯನ ಮಾಡಿ ನಂತರ ಅರ್ಥ ಮಾಡಿಕೊಂಡು ಕಂಪ್ಯೂಟರ್ ನಲ್ಲಿ ತಮ್ಮದೇ ಆದ ರೀತಿಯಲ್ಲಿ ಬರೆದು ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು. ಮುಂದೆ ಅವರು ಹೇಳುತ್ತಾರೆ: ನನಗೆ ನಮ್ಮ ತಂದೆಯವರು ಆಗಾಗ್ಗೆ ಹೇಳುತ್ತಿದ್ದರು: ನಾನು ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅವರ ಖಲೀಫರ ಎಲ್ಲಾ ಸಾಹಿತ್ಯವನ್ನು ಓದುವಷ್ಟು ನನಗೆ ದೀರ್ಘಾಯುಷ್ಯವನ್ನು ನೀಡಲಿ, ಇದರಿಂದ ನಾನು ಕಳೆದ ಜೀವನದಲ್ಲಿ ಕಳೆದುಕೊಂಡದ್ದನ್ನು ಸರಿದೂಗಿಸುವಂತಾಗಲಿ. ದಿವಂಗತರು ಹರ್ಝ್‌ರತ್ ಮುಸ್ಲೆಹ್ ಮೌಊದ್(ರ) ರ ತಫ್ಸೀರ್ ಕಬೀರ್ ಅನ್ನು ಪ್ರೀತಿಸುತ್ತಿದ್ದರು ಮತ್ತು ಅದನ್ನು ಹಲವಾರು ಬಾರಿ ಓದಿದ್ದರು. ಅವರ ಈ ಪುತ್ರ ಹೇಳುತ್ತಾರೆ, ನನಗೆ ಯಾವುದೇ ವಿಷಯದ ಬಗ್ಗೆ ಯಾವುದೇ ಅಗತ್ಯವಿದ್ದಾಗ, ತಂದೆಯು ಈ ವಿಷಯವನ್ನು ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಹರ್ಝ್‌ರತ್ ಮುಸ್ಲೆಹ್ ಮೌಊದ್(ರ) ಮತ್ತು ಖಲೀಫರ ಪುಸ್ತಕಗಳಿಂದ ಸಂಪೂರ್ಣವಾಗಿ ವಿವರವಾಗಿ ಉಲ್ಲೇಖಿಸುತ್ತಿದ್ದರು. ನನ್ನ ಲೈವ್ ಖುತ್‌ಬ ಇಲ್ಲಿಂದ ಹೋಗುತ್ತದೆ. ದಿವಂಗತರು ಖುತ್‌ಬ ಜುಮುಅದ ತಡವಾದ ಅನುವಾದವನ್ನು ಪರಿಷ್ಕರಿಸುತ್ತಿದ್ದರು. ಅಂತೆಯೇ, ಅರೇಬಿಕ್ ಡೆಸ್ಕ್‌ನಿಂದ ನಿಯೋಜಿಸಲಾದ ಪರಿಷ್ಕರಣೆ ಕಾರ್ಯಗಳು ಸಾಮಾನ್ಯವಾಗಿ ಗಂಟೆಗಳ ಕಾಲ ಕುಳಿತುಕೊಳ್ಳುತ್ತಿದ್ದರು. ಅವರು ಹೇಳುತ್ತಾರೆ: ಕೆಲವೊಮ್ಮೆ ನಾನು ಅವರಿಗೆ ನೀವು ವಿಶ್ರಾಂತಿ ಪಡೆಯಬೇಕು ಎಂದು ಹೇಳುತ್ತಿದ್ದೆ ಅದಕ್ಕೆ ಅವರು ನನಗೆ ಜಮಾಅತ್‌ನ ಕೆಲಸದಲ್ಲಿ ಮಾತ್ರ ವಿಶ್ರಾಂತಿ ಲಭಿಸುತ್ತದೆ ಎಂದು ಉತ್ತರಿಸುತ್ತಿದ್ದರು. ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅವರ ಖಲೀಫರ ಪುಸ್ತಕಗಳ ಅನುವಾದವನ್ನು ಪರಿಷ್ಕರಿಸುವಾಗ, ಅವರ ಕಣ್ಣುಗಳು ಆಗಾಗ್ಗೆ ಕಣ್ಣೀರಿನಿಂದ ತುಂಬಿಕೊಳ್ಳುತ್ತಿದ್ದವು. ಅವರು ಬೈಅತ್ ಮಾಡಿದಾಗ, ಅವರು ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಓರ್ವ ಸಹಾಬಿಯ ಘಟನೆಯನ್ನು ವಿವರಿಸಿದರು, ಆ ಸಹಾಬಿಯು ಬೈಅತ್ ಮಾಡಿ ತಮ್ಮ ಗ್ರಾಮಕ್ಕೆ ಬಂದು ಪ್ರತಿ ಮನೆಯ ಬಾಗಿಲು ತಟ್ಟಿ ಮತ್ತು ಎಲ್ಲರಿಗೂ ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಆಗಮನದ ಬಗ್ಗೆ ತಿಳಿಸುತ್ತಿದ್ದರು. ತದನಂತರ, ನಮ್ಮ ತಂದೆಯವರು ಕೂಡ ಅದೇ ವಿಧಾನವನ್ನು ಹೊಂದಿದ್ದರು, ಯಾರು ಅವರನ್ನು ಭೇಟಿಯಾದರು, ಅದು ಕೇವಲ ಐದು ನಿಮಿಷಗಳಾದರೂ, ಅವರು ಖಂಡಿತವಾಗಿಯೂ ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಆಗಮನದ ಬಗ್ಗೆ ಹೇಳುತ್ತಿದ್ದರು. ಹರ್ಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಆಗಮನದ ಸುವಾರ್ತೆಯನ್ನು ಹೇಳುವುದು ನನ್ನ ಕೆಲಸವಾಗಿದೆ ಎಂದು ಅವರು ಹೇಳುತ್ತಿದ್ದರು. ಯಾರಾದರೂ ಅರ್ಥಮಾಡಿಕೊಂಡರೆ, ಅದು ಒಳ್ಳೆಯದು. ಬರದಿದ್ದಲ್ಲಿ ಬಿತ್ತಿಯಾದರೂ ಎಸೆದಿದ್ದೇನೆ, ಅದರ ಬೆಳವಣಿಗೆ ದೇವರ ಕೆಲಸವಾಗಿದೆ, ದೇವರು ಮಾರ್ಗದರ್ಶನ ನೀಡುತ್ತಾನೆ.

ಸೀರಿಯಾದ ವಸೀಮ್ ಮುಹಮ್ಮದ್ ಸಾಹಿಬ್ ಅವರ ಬಗ್ಗೆ ಬರೆಯುತ್ತಾರೆ, ಜುಮುಅದ ನಂತರ, ದಿವಂಗತರು ಮನಮೋಹಕ ಶೈಲಿಯಲ್ಲಿ ದರ್ಸ್ ನಿಡುತ್ತಿದ್ದರು. 2019 ರಿಂದ 2022 ರವರೆಗೆ ಅವರು ಪ್ರಕಾಶನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ದಿವಂಗತರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪುಸ್ತಕಗಳನ್ನು ಓದಲು ತುಂಬಾ ಇಷ್ಟಪಡುತ್ತಿದ್ದರು, ಅದಲ್ಲದೆ ಅವರು ಸ್ವತಃ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪುಸ್ತಕಗಳಲ್ಲಿ ಬರುವಂತಹ ಕಠಿಣ ಪದಗಳ ಅರ್ಥಗಳನ್ನು ಮತ್ತು ವಿವರಣೆಯನ್ನು ಬರೆಯುತ್ತಿದ್ದರು.

ಹಝ್ರತ್ ಮುಸ್ಲೆಹ್ ಮೌಊದ್(ರ.ಅ.) ಅವರ ತಫ್ಸಿರೆ ಕಬೀರ್‌ನ ಅನುವಾದವನ್ನು ಅಧ್ಯಯನ ಮಾಡಿದ ನಂತರ, ಅವರು ಅದರಿಂದ ಪ್ರವಾದಿಗಳ ಕಥೆಗಳನ್ನು ಪ್ರತ್ಯೇಕಿಸಿ ಸ್ವಲ್ಪ ಸಂಕ್ಷಿಪ್ತವಾಗಿ ಪುಸ್ತಕ ರೂಪದಲ್ಲಿ ಪ್ರಸ್ತುತಪಡಿಸಿದರು, ಇದು ಜಮಾಅತ್‌ನ ಅರೇಬಿಕ್ ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಮತ್ತು ಅಹ್ಮದೀಯ ಜಮಾಅತ್‌ನ ಸದಸ್ಯರು ಮತ್ತು ವಿಶೇಷವಾಗಿ ಮಕ್ಕಳು ಇದನ್ನು ಹೆಚ್ಚಾಗಿ ಬಳಸುತ್ತಾರೆ.

ಇಬಾದಹ್ ಬರ್ಬುಶ್ ಸಾಹಿಬ್ ರಿಸಾಲಾ ಅಲ್-ತಕ್ವಾ ಸಂಪಾದಕರಾಗಿದ್ದಾರೆ, ಅವರು ಹೇಳುತ್ತಾರೆ ದಿವಂಗತರು ಅಸಂಖ್ಯಾತ ಗುಣಗಳ ಮಾಲೀಕರಾಗಿದ್ದರು. ಖಿಲಾಫತ್‌ನೊಂದಿಗೆ ಅಸಾಧಾರಣ ಪ್ರೀತಿ ಮತ್ತು ನಿಷ್ಠೆಯೊಂದಿಗೆ ಸಂಬಂಧ ಹೊಂದಿದ್ದರು. ಅವರ ವೃದ್ಧಾಪ್ಯ ಮತ್ತು ಅವರ ಕೆಲಸದ ನಡುವೆಯೂ, ದಿವಂಗತರು ರಿಸಾಲಾ ಅಲ್-ತಕ್ವಾದಲ್ಲಿ ಸ್ವಯಂಸೇವಕರಾಗಿದ್ದರು ಮತ್ತು ಅವರಿಗೆ ಯಾವುದೇ ಜವಾಬ್ದಾರಿಯನ್ನು ನೀಡಿದಾಗ ಅದು ಅವರಿಗೆ ಅನುಗ್ರಹವಾಗಿದೆ ಎಂದು ಪರಿಗಣಿಸುತ್ತಿದ್ದರು. ಏಳು ವರ್ಷಗಳ ಕಾಲ ಅವರು ರಿಸಾಲಾ ಅಲ್-ತಕ್ವಾ ಹಳೆಯ ಸಂಚಿಕೆಗಳನ್ನು ಟೈಪ್ ಮಾಡಲು ಮತ್ತು ಕಂಪ್ಯೂಟರೀಕರಣಗೊಳಿಸಲು ನಮಗೆ ಸಾಕಷ್ಟು ಸಹಾಯ ಮಾಡಿದರು. ದಿವಂಗತರ ಮೇಲೆ ಸರ್ವಶಕ್ತನಾದ ಅಲ್ಲಾಹನು ಕರುಣೆ ಮತ್ತು ಮಗ್‌ಫಿರತ್ ಅನ್ನು ನೀಡಲಿ. ಪದವಿಗಳನ್ನು ಹೆಚ್ಚಿಸಲಿ. ಅವರ ಮಕ್ಕಳಿಗಾಗಿ ಅವರ ಪ್ರಾರ್ಥನೆಗಳನ್ನು ಸ್ವೀಕರಿಸಲಿ.

ಎರಡನೆಯ ಉಲ್ಲೇಖವೆಂದರೆ ಅರ್ಕೈವ್ ಮತ್ತು ಅಲ್‌ಹಕಮ್ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಝೀಝುಮ್ ಜಲೀಸ್ ಅಹ್ಮದ್ ಮುರಬ್ಬಿ ಸಿಲ್‌ಸಿಲಾ ಅವರ ಧರ್ಮಪತ್ನಿಯಾದ ಅಝೀಝಾ ನೋಶಬಾ ಮುಬಾರಕ್ ಸಾಹಿಬಾ ಅವರದ್ದಾಗಿದೆ. ಅವರು ಇತ್ತೀಚೆಗಷ್ಟೇ, ಪಾಕಿಸ್ತಾನದಿಂದ ಹಿಂದಿರುಗುತ್ತಿದ್ದಾಗ, ರಬ್ವಾ ಮತ್ತು ಲಾಹೋರ್ ನಡುವೆ ಅಪಘಾತಕ್ಕೀಡಾಗಿ ಸಾವನ್ನಪ್ಪಿದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಪತಿ ಮತ್ತು ತಂದೆ ತಾಯಿಯಲ್ಲದೆ, ಅವರು ನಾಲ್ಕು ಸಹೋದರರು ಮತ್ತು ಇಬ್ಬರು ಸಹೋದರಿಯರನ್ನು ಅಗಲಿದ್ದಾರೆ. ದಿವಂಗತರ ವಸಿಯ್ಯತ್‌ನ ಪ್ರಕ್ರಿಯೆ ನಡೆಯುತ್ತಿದ್ದಾಗ ಆಕೆ ಹಠಾತ್ತನೆ ನಿಧನ ಹೊಂದಿದ್ದಾರೆ. ಆದಾಗ್ಯೂ, ಆ ಕ್ರಿಯೆಯು ನಡೆಯುತ್ತಿದೆ, ಇನ್‌ಶಾಅಲ್ಲಾಹ್, ಹೀಗಾಗಿ ಅವರು ಮುಸಿಯಾಗಿದ್ದರು.

ಆಕೆಯ ಪತಿ ಜಲೀಸ್ ಅಹ್ಮದ್ ಬರೆಯುತ್ತಾರೆ, ಸರ್ವಶಕ್ತನಾದ ಅಲ್ಲಾಹನು ನನಗೆ ಅನೇಕ ಸದ್ಗುಣಗಳನ್ನು ಹೊಂದಿರುವ ಪತ್ನಿಯನ್ನು ದಯಪಾಲಿಸಿದನು ಅದಕ್ಕಾಗಿ ನಾನು ಅಲ್ಲಾಹನಿಗೆ ಕೃತಜ್ಞನಾಗಿದ್ದೇನೆ. ಆಕೆಯು ವಾಖಿಫೆ ಝಿಂದಗಿಯನ್ನು ವಿವಾಹವಾಗಲು ನಿರ್ಧರಿಸಿದರು. ಸದಾ ಧರ್ಮಕ್ಕೆ ಆದ್ಯತೆ ನೀಡುತ್ತಿದ್ದರು. ಒಮ್ಮೆಯೂ ನನ್ನ ಮೇಲೆ ಯಾವುದೇ ಬೇಡಿಕೆಗಳನ್ನು ಇಟ್ಟಿಲ್ಲ. ಯಾವಾಗಲೂ ಇತರರಿಗೆ ಸಂತೋಷವನ್ನು ತರುತ್ತಿದ್ದರು. ಜಮಾಅತ್‌ನ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಸಹಾಯಕ ಕಾರ್ಯದರ್ಶಿ ಸಂಪತ್ತು ಮತ್ತು ಸಹಾಯಕ ಕಾರ್ಯದರ್ಶಿ ವಸಿಯ್ಯತ್ ಆಗಿ ಸಹಾಯ ಮಾಡಿದರು. ತುಂಬಾ ಕಷ್ಟಪಟ್ಟು ಅರ್ಪಣಾ ಭಾವದಿಂದ ದುಡಿಯುತ್ತಿದ್ದಳು. ನನ್ನ ಕೆಲಸದಲ್ಲೂ ಸಹಾಯ ಮಾಡುತ್ತಿದ್ದಳು. ನನ್ನ ಜಮಾಅತ್ತಿನ ಕೆಲಸಕ್ಕೆ ಎಂದೂ ಆಕ್ಷೇಪ ವ್ಯಕ್ತಪಡಿಸಿಲ್ಲ. ಅವರು ಎಂದಿಗೂ ಬೇಡಿಕೆ ಇರಿಸಲಿಲ್ಲ. ವಾಸ್ತವವಾಗಿ, ಅವರು ನಿಜವಾಗಿಯೂ ವಖ್‌ಫ್‌ನ ಮನೋಭಾವವನ್ನು ಅರ್ಥಮಾಡಿಕೊಂಡಿದ್ದರು. ಪ್ರತಿ ರಂಜಾನ್‌ನಲ್ಲಿ, ಅವರು ಪವಿತ್ರ ಖುರ್‌ಆನ್‌ನ ಅನುವಾದವನ್ನು ಕನಿಷ್ಠ ಮೂರು ಬಾರಿ ಮತ್ತು ಕೆಲವೊಮ್ಮೆ ನಾಲ್ಕು ಬಾರಿ ಪೂರ್ಣಗೊಳಿಸುತ್ತಿದ್ದರು, ಅವರು ಖಿಲಾಫತ್ ಬಗ್ಗೆ ಆಳವಾದ ಗೌರವ ಮತ್ತು ಪ್ರೀತಿಯನ್ನು ಹೊಂದಿದ್ದರು.

ಅವರ ತಾಯಿ ಝೈಬುನ್ನಿಸಾ ಸಾಹಿಬಾ ಹೇಳುತ್ತಾರೆ: ದಿವಂಗತಳು ನನ್ನ ಕಿರಿಯ ಪುತ್ರಿಯಾಗಿದ್ದಳು. ಅವಳು ಅತ್ಯಂತ ಪ್ರೀತಿಯ ಮತ್ತು ಬೆರೆಯುವ ಮಗಳಗಿದ್ದಳು. ನಮಗೆಲ್ಲರಿಗೂ ಅಪಾರವಾದ ಪ್ರೀತಿಯನ್ನು ನೀಡುತ್ತಿದ್ದಳು. ಅವಳು ನನ್ನ ಎಲ್ಲ ಮಕ್ಕಳಲ್ಲಿ ಅತ್ಯಂತ ಬುದ್ಧಿವಂತಳು. ಅವಳು ಉಪವಾಸ ಮತ್ತು ನಮಾಝ್‌ಗೆ ಬದ್ಧಳಾಗಿದ್ದಳು. ಜಮಾಅತ್ತಿನ ಕೆಲಸದಲ್ಲಿ ಮುಂಚೂಣಿಯಲ್ಲಿರುತ್ತಿದ್ದಳು. ಹಫೀಜಾಬಾದ್ ಗ್ರಾಮದ ಪಿಕ್ಕೋಟ್ ಸಾನಿಯಾದಲ್ಲಿ ನಾನು ಲಜ್ನಾ ಸದರ್ ಆಗಿದ್ದಾಗ ನನ್ನ ಕೆಲಸದಲ್ಲಿ ಸಾಕಷ್ಟು ಸಹಾಯ ಮಾಡುತ್ತಿದ್ದಳು. ರಬ್ವಾಗೆ ಬಂದು ಕೂಡ ಜಮಾಅತ್ತಿನ ಕೆಲಸದಲ್ಲಿ ಸಹಾಯ ಮಾಡಿದಳು.

ಕಾಮ್ರಾನ್ ಶಾಹಿದ್ ಅವರ ಸಹೋದರ ಹೇಳುತ್ತಾರೆ: ದಿವಂಗತಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಾಬಿ ಸಹಾಬಿ ಹಝ್ರತ್ ಮಿಯಾಂ ನಿಝಾಮುದ್ದೀನ್ ಸಾಹಿಬ್ ಬಾಘಂದ ಅವರ ಮುಮ್ಮಗಳಾಗಿದ್ದರು. ಅವರು ವಯಸ್ಕರು ಮತ್ತು ಮಕ್ಕಳೊಂದಿಗೆ ದಯೆ ತೋರುತ್ತಿದ್ದರು ಮತ್ತು ಎಲ್ಲರನ್ನು ಪ್ರೀತಿಸುತ್ತಿದ್ದರು. ಮತ್ತು ಖಿಲಾಫತ್‌ನೊಂದಿಗೆ ಅತ್ಯಂತ ಪ್ರಾಮಾಣಿಕತೆ ಮತ್ತು ನಿಷ್ಠೆಯ ಸಂಬಂಧವಿತ್ತು. ಅಲ್ಲಾಹನು ಮೃತರ ಪದವಿಯನ್ನು ಹೆಚ್ಚಿಸಲಿ. ಪ್ರತಿಯೊಬ್ಬರಿಗೂ, ಅವರ ತಂದೆತಾಯಿಯವರಿಗೆ ಮತ್ತು ಪತಿಯನ್ನು ಮತ್ತು ಪ್ರೀತಿಪಾತ್ರರಿಗೆ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ.

ಮುಂದಿನ ಉಲ್ಲೇಖವು ಅಬ್ದುಲ್ ಹಮೀದ್ ಖಾನ್ ಸಾಹಿಬ್ ಅವರ ಪತ್ನಿ ಮುಕರ್ರಮಾ ರಜಿಯಾ ಸುಲ್ತಾನಾ ಸಾಹಿಬಾ ರಬ್ವಾಹ್ ಅವರದ್ದಾಗಿದೆ. ಅವರು ಅಬ್ದುಲ್ ಖಯೂಮ್ ಪಾಷಾ ಸಾಹಿಬ್, ಅಮೀರ್ ಮತ್ತು ಐವರಿ ಕೋಸ್ಟ್‌ನ ಮಿಷನರಿ ಇಂಚಾರ್ಜ್ ಅವರ ತಾಯಿ ಆಗಿದ್ದರು. ಅವರು ಇತ್ತೀಚೆಗೆ ತಮ್ಮ 92 ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿಯಾಗಿದ್ದರು.

ಖಯ್ಯೂಮ್ ಪಾಷಾ ಸಾಹಿಬ್ ಬರೆಯುತ್ತಾರೆ: ನೀವು ತೆಹ್ರೀಕ್ ಜದೀದ್ ದಿವಂಗತ ಮಾಜಿ ವಕೀಲೆ ಅಲ್‌ಲಾ ಮುಕರ್ರಮ್ ಚೌಧರಿ ಹಮೀದುಲ್ಲಾ ಸಾಹಿಬ್ ಅವರ ಸಹೋದರಿಯಾಗಿದ್ದರು. ಅವರ ತಂದೆತಾಯಿಯವರು 1929 ರಲ್ಲಿ ಅಹ್ಮದಿಯ್ಯತ್ ಅನ್ನು ಸ್ವೀಕರಿಸಿದರು. ಮೊದಲಿನಿಂದಲೂ, ಅವರು ರೂಹಾನಿ ಖಝಾಈನ್‌ನ ಅಧ್ಯಯನದಲ್ಲಿ ಹೆಚ್ಚಿನ ಉತ್ಸಾಹವನ್ನು ಹೊಂದಿದ್ದರು. ಆದ್ದರಿಂದ ನೀವು ನಿಮ್ಮ ಜೀವನದಲ್ಲಿ ಅನೇಕ ಬಾರಿ ರೂಹಾನಿ ಖಝಾಈನ್ ಮತ್ತು ತಫ್ಸಿರ್ ಕಬೀರ್ ಮತ್ತು ಇತರ ಜಮಾಅತ್‌ನ ಸಾಹಿತ್ಯದ ಅಧ್ಯಯನವನ್ನು ಪೂರ್ಣಗೊಳಿಸಿದ್ದರು. ಅವರಿಗೆ ತಮ್ಮ ಬಡಾವಣೆ ದಾರುಲ್ ಉಲೂಮ್ ವಸ್ತೀಯಲ್ಲಿ ಸದರ್ ಲಜ್ನಾ ಮತ್ತು ಸೆಕ್ರೇಟರಿ ಮಾಲ್ ಆಗಿ ಸೇವೆ ಸಲ್ಲಿಸಲು ಸಾಧ್ಯವಾಯಿತು. ಅವರು ಹೇಳುತ್ತಾರೆ: ನಮ್ಮ ಕೆಲವು ಸಂಬಂಧಿಕರು ನಮ್ಮ ತಾಯಿಗೆ ಹೇಳಿದರು ನಿಮಗೆ ಒಬ್ಬನೇ ಮಗನಿದ್ದಾನೆ, ಪತಿ ತೀರಿಕೊಂಡಿದ್ದಾರೆ, ಕೇವಲ ಜೀವನ ಭತ್ಯೆ ಪಡೆಯುವ ಆತನನ್ನು ಜಾಮಿಯಾದಲ್ಲಿ ಮುರಬ್ಬಿಯನ್ನಾಗಿ ಮಾಡುವ ಬದಲು ಬೇರೆ ಯಾವುದಾದರು ಕ್ಷೇತ್ರಕ್ಕೆ ಕಳುಹಿಸು. ಅದಕ್ಕೆ ನಮ್ಮ ತಾಯಿ ಅವರು ಜಾಮಿಯಾಗೆ ಪ್ರವೇಶಿಸುವುದಾಗಿ ಉತ್ತರಿಸಿದರು. ಮತ್ತು ಪೋಷಣೆಗೆ ಸಂಬಂಧಿಸಿದಂತೆ, ದೇವರು ಪೋಷಕನಾಗಿದ್ದಾನೆ. ನಾನು ಅವನನ್ನು ನಂಬುತ್ತೇನೆ. ಅವರು ಮುಂದೆ ಹೇಳುತ್ತಾರೆ: ನಮ್ಮ ತಾಯಿಗೆ ಪಿಂಚಣಿ ಸಿಕ್ಕರೆ ಅಥವಾ ಇನ್ನಾವುದೇ ಮೂಲದಿಂದ ಆದಾಯ ಬಂದರೆ ತಕ್ಷಣ ಸೆಕ್ರೆಟರಿ ಮಾಲ್ ಮನೆಗೆ ಹೋಗಿ ಚಂದ ನೀಡುತ್ತಿದ್ದರು. ಅವರು ಒಬ್ಬ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಬ್ದ್ ಅಲ್-ಖಯ್ಯುಮ್ ಪಾಷಾ, ಆಕೆಯ ಪುತ್ರ, ನಾನು ಹೇಳಿದಂತೆ, ಐವರಿ ಕೋಸ್ಟ್‌ನಲ್ಲಿ ಮಿಷನರಿ ಇಂಚಾರ್ಜ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ಅವರು ಕ್ರಿಯಾಶೀಲ ಕ್ಷೇತ್ರದಲ್ಲಿದ್ದ ಕಾರಣ ತಮ್ಮ ತಾಯಿಯ ನಮಾಝ್ ಜನಝದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಅಲ್ಲಾಹನು ಅವರಿಗೆ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ. ಅವರ ತಾಯಿಯ ಪದವಿಗಳನ್ನು ಹೆಚ್ಚಿಸಲಿ.

ಮುಂದಿನ ಉಲ್ಲೇಖವು ಲಾಹೋರ್‌ನ ಡಾ. ಮುಹಮ್ಮದ್ ಸಲೀಂ ಸಾಹಿಬ್ ಅವರ ಪತ್ನಿ ಬುಶ್ರಾ ಬೇಗಂ ಸಾಹಿಬಾ ಅವರದ್ದಾಗಿದೆ. ಇವರು ಸೆರಾಪಿಯೋನ್‌ನಲ್ಲಿ ಮುಬಲ್ಲಿಗ್ ಇಂಚಾರ್ಜ್ ಆಗಿರುವ ಮುಹಮ್ಮದ್ ನಯೀಮ್ ಅಝ್‌ಹರ್ ಸಾಹಿಬ್ ಅವರ ತಾಯಿ ಆಗಿದ್ದಾರೆ. ಅವರು ಇತ್ತೀಚೆಗೆ ಎಪ್ಪತ್ತೆಂಟನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲಾಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಅವರು ಮೂಸೀ ಆಗಿದ್ದರು. ಅವರು ಇಬ್ಬರು ಪುತ್ರರು ಮತ್ತು ಐವರು ಪುತ್ರಿಯರನ್ನು ಅಗಲಿದ್ದಾರೆ. ಅವರ ಪುತ್ರ ನಯೀಮ್ ಅಝ್‌ಹರ್ ಸಾಹಿಬ್ ಕ್ರಿಯಾಶೀಲ ಕ್ಷೇತ್ರದಲ್ಲಿದ್ದ ಕಾರಣ ತಾಯಿಯ ನಮಾಝ್ ಜನಾಝದಲ್ಲೆ ಸೇರಲು ಸಾಧ್ಯವಾಗಲಿಲ್ಲ. ಜನಾಝದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ನಯೀಮ್ ಅಝ್‌ಹರ್ ಸಾಹಿಬ್ ಅವರು ಬರೆಯುತ್ತಾರೆ: ನಮ್ಮ ತಾಯಿ ಹುಟ್ಟಿನಿಂದ ಅಹ್ಮದಿ ಯಾಗಿರಲಿಲ್ಲ, ಆದರೆ ಅವರ ಸಂಬಂಧಿಕರು ಅಹ್ಮದಿಯರಾಗಿದ್ದರು ಮತ್ತು ಅವರು ಸತ್ಯವನ್ನು ಹುಡುಕಲು ಉತ್ಸುಕರಾಗಿದ್ದರು. ಅವರು ಅಲ್ಲಾಹನ ಮುಂದೆ ಬಹಳ ಶ್ರದ್ಧೆಯಿಂದ ಸುಆ ಮಾಡುತ್ತಿದ್ದರು, ನಂತರ ಅವರಿಗೆ ಮನಃಶಾಂತಿಯಾದಾಗ ಅಂತಿಮವಾಗಿ 1964 ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರ ಬೈಅತ್ ಮಾಡಿದರು ಮತ್ತು

ಇಡೀ ಜೀವನ ಈ ಸಂಬಂಧವನ್ನು ಬಹಳ ನಿಷ್ಠೆಯಿಂದ ನಿಭಾಯಿಸಿದರು ಮತ್ತು ಅಹ್ಮದಿಯ್ಯತ್‌ಗಾಗಿ ಎಲ್ಲಾ ರೀತಿಯ ತ್ಯಾಗಗಳನ್ನು ಮಾಡಿದರು. ಅಲ್ಲಾಹನ ಅನುಗ್ರಹದಿಂದ ಅವರು ಬಹಳಷ್ಟು ಪ್ರಾರ್ಥಿಸುವ, ಐದು ಹೊತ್ತಿನ ನಮಾಝುನ್ನು ನಿಯಮಿತವಾಗಿ ನಿರ್ವಹಿಸುವ ಮತ್ತು ತಹಜ್ಜುದ್ ನಮಾಝ್ ಸಹ ನಿರ್ವಹಿಸುವ ಧೈರ್ಯಶಾಲಿ ಮಹಿಳೆಯಾಗಿದ್ದರು. ಅವರು ನೋವನ್ನು ಮೌನವಾಗಿ ಸಹಿಸಿಕೊಳ್ಳುತ್ತಿದ್ದರು, ಆದರೆ ಅವರು ಎಂದಿಗೂ ನಾಲಿಗೆ ಮೇಲೆ ದೂರು ನೀಡಲಿಲ್ಲ. ಖಲೀಫಾರ ಪ್ರತಿಯೊಂದು ಆರ್ಥಿಕ ತ್ಯಾಗ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಜಮಾಅತ್ತಿನ ಚಂದವನ್ನು ಮೊದಲ ಅವಧಿಯಲ್ಲಿ ನಿಯಮಿತವಾಗಿ ಪಾವತಿಸುತ್ತಿದ್ದರು ಮತ್ತು ನಂತರ ಹೆಚ್ಚುವರಿ ಚಂದಗಳನ್ನು ಸಹ ನೀಡುತ್ತಿದ್ದರು. ಅವರು ಅಗತ್ಯವಿರುವ ಎಲ್ಲರಿಗೂ ಸಹಾಯ ಮಾಡುತ್ತಿದ್ದರು ಮತ್ತು ಯಾರನ್ನೂ ಬರಿಗೈಯಲ್ಲಿ ಹಿಂತಿರುಗಿಸಲಿಲ್ಲ. ಮೃತರ ಮೇಲೆ ಅಲ್ಲಾಹನು ಕರುಣೆ ಮತ್ತು ಮಗ್‌ಫಿರತ್ ಅನ್ನು ದಯಪಾಲಿಸಲಿ. ಅವರ ಮಕ್ಕಳಿಗಾಗಿ ಅವರ ಪ್ರಾರ್ಥನೆಗಳನ್ನು ಸ್ವೀಕರಿಸಲಿ.

ಮುಂದಿನ ಉಲ್ಲೇಖ ನಾರ್ವೆಯಾ ಮುಕರ್ರಮ್ ರಶೀದ್ ಅಹ್ಮದ್ ಚೌಧರಿ ಸಾಹಿಬ್ ಅವರದ್ದಾಗಿದೆ. ಚೌಧರಿ ಗುಲಾಮ್ ಹುಸೇನ್ ಸಾಹಿಬ್ ಮೇಲ್ವಿಚಾರಕರ ಪುತ್ರ ಆಗಿದ್ದರು. ಅವರು ಇತ್ತೀಚೆಗೆ ಎಂಬತ್ತೆರಡನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ತಮ್ಮ ಅನಾರೋಗ್ಯವನ್ನು ಅತ್ಯಂತ ಧೈರ್ಯ ಮತ್ತು ಶೌರ್ಯ ಮತ್ತು ತಾಳ್ಮೆಯಿಂದ ಸಹಿಸಿದರು. ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರ ತಂದೆ, ಚೌಧರಿ ಗುಲಾಮ್ ಹುಸೇನ್ ಸಾಹಿಬ್ ಮೇಲ್ವಿಚಾರಕರು, 1926 ರಲ್ಲಿ ಸ್ವತಃ ಖದಿಯಾನ್‌ಗೆ ಹೋಗಿ ಹಝ್ರತ್ ಖಲೀಫತುಲ್ ಮಸೀಹ್ ಅಲ್ ಸಾನಿ(ರ) ರ ಕೈಯಲ್ಲಿ ಬೈಅತ್ ಮಾಡುವ ಸೌಭಾಗ್ಯ ಪಡೆದರು ಮತ್ತು ನಂತರ ಅವರು ತಮ್ಮ ಜೀವನವನ್ನು ಸಮರ್ಪಿಸಿದರು. ದಾರ್-ಉಲ್-ಖಾಝಾ ಖಾದಿಯಾನ್ ಮತ್ತು ರಬ್ವಾದಲ್ಲಿ ಖಾಝಿಯಾಗಿ ಸೇವೆ ಸಲ್ಲಿಸುವ ಅವಕಾಶ ಅವರಿಗೆ ಲಭಿಸಿತು. ಅಂತೆಯೇ, ಅವರು ಕೇಂದ್ರ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಸೇವೆ ಸಲ್ಲಿಸಲು ಸಾಧ್ಯವಾಯಿತು. ಚೌಧರಿ ರಶೀದ್ ಅವರು ರಬ್ವಾದಲ್ಲಿ ಆರಂಭಿಕ ದಿನಗಳಲ್ಲಿ ತಮ್ಮ ತಂದೆಯೊಂದಿಗೆ ಕೆಲಸ ಮಾಡಲು ಅನೇಕ ಅವಕಾಶಗಳನ್ನು ಹೊಂದಿದ್ದರು. ಅವರು ಎರಡನೇ ಖಿಲಾಫತ್ ಮತ್ತು ಮೂರನೇಯ-ಖಿಲಾಫತ್ ಅವಧಿಯಲ್ಲಿ ಕಸರ್-ಎ-ಖಿಲಾಫತ್ ಮತ್ತು ಇತರ ಜಮಾಅತ್ತಿನ ಕಟ್ಟಡಗಳಲ್ಲಿ ಎಲೆಕ್ಟ್ರಿಷಿಯನ್ ಆಗಿ ಬಹಳಷ್ಟು ಕೆಲಸ ಮಾಡಿದರು. 1970 ರಲ್ಲಿ ನಾರ್ವೆಗೆ ಸ್ಥಳಾಂತರಗೊಂಡರು. ಅಲ್ಲಿ ಜಮಾಅತ್ತಿನ ಸೇವೆಗಳಲ್ಲಿ ಸದಾ ಮುಂದಾಳತ್ವ ವಹಿಸುತ್ತಿದ್ದರು. ಅವರ ನಿಸ್ವಾರ್ಥ ಸೇವೆಗಳು ಸೇರಿವೆ. ನಾರ್ವೆಯ ಮೊದಲ ಕೇಂದ್ರವು ನಿಮ್ಮ ನಿಸ್ವಾರ್ಥ ಸೇವೆಯನ್ನೂ ಒಳಗೊಂಡಿದೆ. ಅಲ್ಲಿ ಅವರು ಸ್ವತಃ ಕೆಲಸ ಮಾಡಿ ಜಮಾಅತ್ ನ ಬಹಳಷ್ಟು ಹಣವನ್ನು ಉಳಿಸಿದರು. ದೀರ್ಘಕಾಲ ಜಮಾಅತ್ ನಾರ್ವೆಯ ಸಾರ್ವಜನಿಕ ವ್ಯವಹಾರಗಳ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಲು ಸಾಧ್ಯವಾಯಿತು.

ಅವರ ಮಕ್ಕಳಾದ ಮುಝಫ್ಫರ್ ಚೌಧರಿ ಮತ್ತು ಮನವ್ವರ್ ಚೌಧರಿ ಬರೆಯುತ್ತಾರೆ: ಅವರಿಗೆ ಖಿಲಾಫತ್ ಬಗ್ಗೆ ಆಳವಾದ ಮತ್ತು ಅಪಾರವಾದ ಪ್ರೀತಿ ಇತ್ತು. ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ರ ನಾರ್ವೆ ಭೇಟಿಗಳ ಎಲ್ಲಾ ಜವಾಬ್ದಾರಿಯನ್ನು ಅವರಿಗೆ ವಹಿಸಲಾಯಿತು. ಹುಝೂರ್(ರಹ್)ರವರು ಅವರನ್ನು ನಾರ್ವೆಗೆ ತನ್ನ ಗೈಡ್ (ಮಾರ್ಗದರ್ಶಕ) ಎಂದು ಕರೆಯುತ್ತಿದ್ದರು ಮತ್ತು ಅವರು ಖುತ್‌ಬ ಜುಮುಅದಲ್ಲಿ ಅವರ ಸೇವೆಯನ್ನು ಸಹ ಉಲ್ಲೇಖಿಸಿದ್ದಾರೆ. ನನ್ನೊಂದಿಗೆಯೂ ಖಿಲಾಫತ್ ನಂತರವೂ ಸಹ ಬಹಳ ನಿಷ್ಠಾವಂತರಾಗಿದ್ದರು. ಮೊದಲು ಸಹ ಅವರೊಂದಿಗೆ ಪರಿಚಯವಿತ್ತುಆದರೆ ಆ ಸಂಬಂಧವು ನಂತರ ಮತ್ತಷ್ಟು ಬಲಹೊಂದಿತು. ಅವರ ತಂದೆಯೂ ನನ್ನ ತಂದೆಗೆ ತುಂಬಾ ಆತ್ಮೀಯರಾಗಿದ್ದರು. ಬಾಲ್ಯದಿಂದಲೂ, ಚೌಧರಿ ಗುಲಾಮ್ ಹುಸೇನ್ ಸಾಹಿಬ್ ಅವರು ಯಾವಾಗಲೂ ನಗುತ್ತಿರುವ ಮತ್ತು ಉತ್ತಮ ಸ್ವಭಾವವನ್ನು ಹೊಂದಿದ್ದರು ಮತ್ತು ಚೌಧರಿ ರಶೀದ್ ಸಾಹಿಬ್ ಅವರ ಅಭ್ಯಾಸಗಳು ಅವರ ತಂದೆಯಂತೆಯೇ ಇರುವುದನ್ನು ನಾವು ನೋಡಿದ್ದೇವೆ.

ಅಲ್ಲಾಹನು ಅವರ ಮೇಲೆ ಕರುಣಿಸಲಿ. ಧರ್ಮ ಮತ್ತು ರಾಷ್ಟ್ರೀಯತೆಯ ತಾರತಮ್ಯವಿಲ್ಲದೆ ದೈವಜೀವಿಗಳ ಸಹಾನುಭೂತಿಗಾಗಿ ಯಾವಾಗಲೂ ಸಿದ್ಧರಾಗಿದ್ದರು. ಅವರ ಪತ್ನಿಯನ್ನು ಹೊರತುಪಡಿಸಿ, ಅವರು ಇಬ್ಬರು ಪುತ್ರರು ಮತ್ತು ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ ಮತ್ತು ಅವರು ಮುಕರ್ರಮ್ ಇನಾಮ್-ಉಲ್-ಹಕ್ ಕೌಸರ್ ಸಾಹಿಬ್, ಅಮೀರ್ ಜಮಾಅತ್ ಆಸ್ಟ್ರೇಲಿಯಾ ಮತ್ತು ಆಸ್ಟ್ರೇಲಿಯಾದ ಮಿಷನರಿ ಇಂಚಾರ್ಜ್‌ನ ಸೋದರ ಮಾವ ಆಗಿದ್ದರು. ಸರ್ವಶಕ್ತನಾದ ಅಲ್ಲಾಹನು ಎಲ್ಲರಿಗೂ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ. ನಮಾಝಿನ ನಂತರ, ನಾನು ಹೇಳಿದಂತೆ, ಅವರ ಜನಾಝ ನಮಾಝನ್ನು ನಿರ್ವಹಿಸುತ್ತೇನೆ.

...*...*...*...

**(ಬದರ್ ಸಂಚಿಕೆ 13ರ ಪುಟ ಸಂಖ್ಯೆ-12ರ ಉಳಿದ ಭಾಗ)**

ಮೌಲಾನಾ ಮುಹಮ್ಮದ್ ಅಲಿ ಜೋಹರ್ ಸಾಹಿಬ್. ಅವರು ರಾಮ್‌ಪುರದಲ್ಲಿ 1878 ರಲ್ಲಿ ಜನಿಸಿದರು. ಅವರು 1931 ರಲ್ಲಿ ನಿಧನರಾದರು. ಅವರು ಕಲ್ಕತ್ತಾದಿಂದ ಕಾಮ್ರೇಡ್ ಎಂಬ ವಾರಪತ್ರಿಕೆಯನ್ನು ಪ್ರಕಟಿಸಿದರು. ಅವರು ದೆಹಲಿಯಲ್ಲಿ ಉರ್ದುವಿನಲ್ಲಿ ಹಮ್ದರ್ದ್ ಎಂಬ ಪತ್ರಿಕೆಯನ್ನೂ ಪ್ರಕಟಿಸಿದರು. 1923 ರಲ್ಲಿ ಅವರನ್ನು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ದುಂಡುಮೇಜಿನ ಸಮ್ಮೇಳನದಲ್ಲಿ ಭಾಗವಹಿಸಲು ಲಂಡನ್‌ಗೆ ತೆರಳಿದ್ದರು. ಅಲ್ಲಿ ಅವರು ಜನವರಿ 4, 1931 ರಂದು ನಿಧನರಾದರು. (ಮೌಲಾನಾ ಮುಹಮ್ಮದ್ ಅಲೀ ಜೋಹರ್ (ಹಯಾತ್ ವ ಖಿದ್ಮಾತ್), ಡಾ. ನದೀಮ್ ಶಫೀಕ್ ಮಲಿಕ್, ಪುಟಗಳು 15, 30 ರಿಂದ 33, 41 ರಿಂದ 45, 48)

ಪಾಕಿಸ್ತಾನದ ಸ್ಥಾಪನೆ, ಸ್ಥಿರತೆ ಮತ್ತು ಅಭಿವೃದ್ಧಿಯ ಪ್ರತಿಯೊಂದು ಹಂತದಲ್ಲೂ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಸೇವೆಗಳು ಪ್ರಮುಖವಾಗಿವೆ. ಇಂದು ಅವರು ಅಹ್ಮದಿಯರು ಏನು ಮಾಡಿದರು ಎಂದು ಹೇಳುತ್ತಾರೆ? ಅತ್ಯುತ್ತಮ ಸೇವೆಗಳು ಇದ್ದವು ಎಂದು ಅವರೇ ಒಪ್ಪಿಕೊಳ್ಳುತ್ತಿದ್ದಾರೆ. ಮೌಲಾನಾ ಮುಹಮ್ಮದ್ ಅಲಿ ಜೋಹರ್ ಸಾಹಿಬ್ ಅವರು ಸೆಪ್ಟೆಂಬರ್ 26, 1927 ರಂದು ತಮ್ಮ ಪತ್ರಿಕೆ ಹಮ್ದರ್ದ್‌ನಲ್ಲಿ ಈ ನಿಟ್ಟಿನಲ್ಲಿ ತಮ್ಮ ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ. "ಜನಾಬ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಮತ್ತು ಅವರ ಈ ಸಂಘಟಿತ ಜಮಾಅತಿನ ಪ್ರಸ್ತಾಪವನ್ನು ಈ ಸಾಲುಗಳಲ್ಲಿ ಪ್ರಸ್ತಾಪಿಸದೇ ಇದ್ದರೆ ಅದು ಕೃತಘ್ನತೆ ಆಗುವುದು. ಅವರು ಧಾರ್ಮಿಕ ಭಿನ್ನತೆಯನ್ನು ಲೆಕ್ಕಿಸದೇ ಎಲ್ಲ ಮುಸ್ಲಿಮರ ಏಳಿಗೆಗಾಗಿ ಸಂಪೂರ್ಣ ಗಮನವನ್ನು ಕೊಟ್ಟರು. ಈ ಜನರು ಈಗ ಒಂದೆಡೆ ಮುಸ್ಲಿಮರ ರಾಜಕೀಯದಲ್ಲಿ ಅಭಿರುಚಿ ಇರಿಸುತ್ತಿದ್ದಾರೆ. ಮತ್ತೊಂದೆಡೆ ಮುಸ್ಲಿಮರ ಸಂಪರ್ಕ ಮತ್ತು ವ್ಯಾಪಾರದ ವ್ಯವಸ್ಥೆಯಲ್ಲಿ ಅತ್ಯಂತ ಪರಿಶ್ರಮದಿಂದ ನಿರತರಾಗಿರುವರು. ಈ ಸಂಘಟಿತ ಪಂಗಡದ ವೈಖರಿ ಇಸ್ಲಾಮಿನ ಬಹುಭಾಗಕ್ಕೆ ಸಾಮಾನ್ಯವಾಗಿ ಮತ್ತು ಅದರ ವ್ಯಕ್ತಿಗಳಿಗೆ ವಿಶೇಷವಾಗಿ ಮಾರ್ಗದೀಪವಾಗುವುದು." (ತಾರೀಖ್' ಅಹ್ಮದೀಯತ್, ಸಂಪುಟ-4, ಪುಟ-622)

ದೊಡ್ಡ ದೊಡ್ಡ ವೇದಿಕೆಗಳಲ್ಲಿ ಕುಳಿತು ವಾದಗಳನ್ನು ಮಂಡಿಸುತ್ತಾರೆ. ನಾವು ಧಾರ್ಮಿಕ ನಾಯಕರ ಮೇಲ್ಮೈಯಲ್ಲಿ ದೊಡ್ಡ ವಾದಗಳನ್ನು ಮಾಡುತ್ತಾರೆ, ಆದರೆ ಆಂತರಿಕವಾಗಿ ಇವು ಕೇವಲ ಅವರ ವಾದಗಳಾಗಿವೆ. ಕೆಲವು ಅತ್ಯಂತ ತುಚ್ಛ ವಾದಗಳಾಗಿವೆ. ಈ ಜನರು ಅವರಿಗೆ ದಾರಿದೀಪವೆಂದು ಸಾಬೀತುಪಡಿಸುತ್ತಾರೆ. ಅಂತಹ ಒಂದು ದಿನ ಬರುವುದು. ಇದು ನೀತಿವಂತ ವಿದ್ವಾಂಸರ ಅಭಿಪ್ರಾಯವಾಗಿದೆ. ಅಹ್ಮದೀಯರನ್ನು ಪಾಕಿಸ್ತಾನ ಮತ್ತು ಇಸ್ಲಾಮಿನ ಶತ್ರುಗಳು ಎಂದು ಕರೆಯುವ ಇಂದಿನ ವಿದ್ವಾಂಸರು ಅಹ್ಮದೀಯರಾಗಲಿ ಅಥವಾ ಇಸ್ಲಾಮಿನ ನೋವನ್ನು ಹೊತ್ತಿರುವ ಈ ತಥಾಕಥಿತ ವಿದ್ವಾಂಸರಾಗಲಿ ಕನ್ನಡಿಯಲ್ಲಿ ಅವರ ಮುಖವನ್ನು ನೋಡಬೇಕು.

ಸೈಯದ್ ಹಬೀಬ್ ಸಾಹಿಬ್ ಎಂಬವರೂ ಇದ್ದಾರೆ. ಅವರು 1891 ರಲ್ಲಿ ಜನಿಸಿದರು. ಅವರು ಸುಪ್ರಸಿದ್ಧ ಮತ್ತು ಪ್ರಮುಖ ಉರ್ದು ಪತ್ರಕರ್ತರಾಗಿದ್ದರು. ಫೂಲ್ ಔರ್ ತೆಹ್‌ಝೀಬೆ ನಿಸ್ವಾನ್ ಎಂಬ ಪತ್ರಿಕೆಯ ಸಂಪಾದಕರಾಗಿ ನೇಮಕಗೊಂಡಿದ್ದರು. ನಕಾಶ್ ಪತ್ರಿಕೆ ಮತ್ತು ನಂತರ "ಸಿಯಾಸತ್" ಮತ್ತು ದಿನಪತ್ರಿಕೆ "ಫಾಝಿ" ಎಂಬುದು ಪ್ರಕಟಿಸಿದರು. ಅವರು ಅತ್ಯಂತ ದಿಟ್ಟ ಮತ್ತು ನಿರ್ಭೀತ ಪತ್ರಕರ್ತರಾಗಿದ್ದರು. ಅವರು 1951 ರಲ್ಲಿ ನಿಧನರಾದರು. (ಅಬ್ದುಲ್ ಮಜೀದ್ ಸಲಿಕ್ ಅವರಿಂದ ಯಾರನ್-ಎ-ಕಹಿನ್ ನಿಂದ ಆಯ್ದುಕೊಳ್ಳಲಾಗಿದೆ, ಪುಟ 189-200 "ಸೈಯದ್ ಹಬೀಬ್" ಅಡಿಯಲ್ಲಿ)

ಅಖಿಲ ಭಾರತ ಕಾಶ್ಮೀರ ಸಮಿತಿಯನ್ನು 25 ಜುಲೈ 1931 ರಂದು ಸ್ಥಾಪಿಸಲಾಯಿತು. ಹಝ್ರತ್ ಮುಸ್ಲೆಹ್ ಮೌಊದ್(ರ) ಈ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದಾಗ. ಆರಂಭದಲ್ಲಿ, ಸಮಿತಿಯನ್ನು ರಚಿಸಿದಾಗ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರನ್ನು ಎಲ್ಲಾ ಮುಸ್ಲಿಮರು ಸರ್ವಾನುಮತದಿಂದ ಅಧ್ಯಕ್ಷರನ್ನಾಗಿ ಮಾಡಿದರು. ಆದಾಗ್ಯೂ, ಹಝ್ರತ್ ಮುಸ್ಲೆಹ್ ಮೌಊದ್(ರ) ಬಂದು ಒಂದು ಸಮಯದಲ್ಲಿ ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು, ನಂತರ ಸೈಯದ್ ಹಬೀಬ್ ಸಾಹಿಬ್ ಅವರು ತಮ್ಮ ಪತ್ರಿಕೆಯ ಸಿಯಾಸತ್ ಲಾಹೋರ್

ಪ್ರಕಟಣೆಯಲ್ಲಿ 18 ಮೇ 1933 ರಂದು ಬರೆದರು: "ಅವರ ಉನ್ನತ ಸಾಮರ್ಥ್ಯದ ಹೊರತಾಗಿಯೂ, ಡಾ. ಇಕ್ಬಾಲ್ ಅಂದರೆ ಡಾ. ಅಲ್ಲಾಮಾ ಇಕ್ಬಾಲ್ ಸಾಹಿಬ್ ಮತ್ತು ಮಲಿಕ್ ಬರ್ಕತ್ ಅಲಿ ಸಾಹಿಬ್ ಇಬ್ಬರೂ ಈ ಕೆಲಸವನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ ಮತ್ತು ಕಾಶ್ಮೀರದ ಪರಿಸ್ಥಿತಿಯು ನಿರ್ಣಾಯಕವಾಗಿದ್ದ ಕಾಲದಲ್ಲಿ, ಆ ಯುಗದಲ್ಲಿ, ಮಿರ್ಝಾ ಸಾಹಿಬ್ ಅವರನ್ನು ನಂಬಿಕೆಗಳ ಭಿನ್ನಾಭಿಪ್ರಾಯಗಳ ನಡುವೆಯೂ ಅವರನ್ನು ಅಧ್ಯಕ್ಷರನ್ನಾಗಿ ಜನರು ಆಯ್ಕೆ ಮಾಡಿದರು ಅವರು ಕೆಲಸದ ಯಶಸ್ಸನ್ನು ಗಮನದಲ್ಲಿಟ್ಟುಕೊಂಡು ಅತ್ಯುತ್ತಮ ಆಯ್ಕೆಯನ್ನು ಮಾಡಿದ್ದರು. ಆ ಸಮಯದಲ್ಲಿ, ಮಿರ್ಝಾ ಸಾಹಿಬ್ ಅವರು ನಂಬಿಕೆಗಳ ಭಿನ್ನಾಭಿಪ್ರಾಯದಿಂದ ಆಯ್ಕೆಯಾಗದಿದ್ದರೆ, ಈ ಚಳುವಳಿ ಸಂಪೂರ್ಣವಾಗಿ ವಿಫಲವಾಗುತ್ತಿತ್ತು ಮತ್ತು ಮೃತ ಉಮ್ಮಾ ತೀವ್ರವಾಗಿ ಹಾನಿಗೊಳಗಾಗುತ್ತಿತ್ತು.

ನನ್ನ ಅಭಿಪ್ರಾಯದಲ್ಲಿ, ಮಿರ್ಝಾ ಸಾಹಿಬ್ ಅವರ ಅಗಲಿಕೆ ಸಮಿತಿಯ ಸಾವಿಗೆ ಸಮಾನವಾಗಿದೆ. ಸಂಕ್ಷಿಪ್ತವಾಗಿ, ನಮ್ಮ ಆಯ್ಕೆಯ ಸಿಂಧುತ್ವವು ಈಗ ಜಗತ್ತಿಗೆ ಸ್ಪಷ್ಟವಾಗುತ್ತದೆ. (ಮಾಸಿಕ ಖಾಲಿದ್ ಸೈಯದ್ನಾ ಮುಸ್ಲೆಹ್ ಮೌಊದ್(ರ), ಜೂನ್-ಜುಲೈ 2008, ಪುಟ 323-324)

ಮಿರ್ಝಾ ಸಾಹೇಬರು ಏನು ಕೆಲಸ ಮಾಡಿದರು ಮತ್ತು ಡಾ.ಅಲ್ಲಮ ಸಾಹೇಬರು ಏನು ಮಾಡುತ್ತಾರೆ ಮತ್ತು ಅವರಿಲ್ಲದೆ ಅವರ ಸಮಿತಿ ಏನು ಮಾಡುತ್ತದೆ ಎಂಬುದು ಈಗ ತಿಳಿಯುತ್ತದೆ. ತದನಂತರ ಏನಾಯಿತು ಎಂದು ಜಗತ್ತು ನೋಡಿದೆ. ಎಲ್ಲವೂ ಮುಂದಿದೆ. ಅವರು(ರ) ಏಕೆ ಹೀಗೆ ಮಾಡಿದರು? ಏಕೆಂದರೆ ಬಂಧಿತರ ವಿಮೋಚನೆಯ ನೋವು ನಿಮ್ಮಲ್ಲಿತ್ತು ಮತ್ತು ಅದಕ್ಕೆ ನೀವೇ ಕಾರಣರಾಗಬೇಕಿತ್ತು. ಅಧ್ಯಕ್ಷ ಸ್ಥಾನ ಬಿಟ್ಟು ನಂತರ ಸಾಕಷ್ಟು ಸಮಿತಿ ಕೆಲಸ ಮಾಡಿದ್ದೀರಿ ಆದರೆ ಈ ನೋವಿನಿಂದ ಹಿಂದೆ ಸರಿದು ಕೈಲಾದಷ್ಟು ಸಹಾಯ ಮಾಡಿದ್ದೀರಿ ಇದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ.

ನಂತರ ಮೌಲಾನಾ ಅಬ್ದುಲ್ ಮಜೀದ್ ದರಿಯಾಬಾದಿ ಇದ್ದಾರೆ. ಅವರು 1892 ರಲ್ಲಿ ಜನಿಸಿದರು. ಅವರು ಭಾರತೀಯ ಉರ್ದು ಬರಹಗಾರ, ಲೇಖನಿ, ಸಂಶೋಧಕ ಮತ್ತು ಪವಿತ್ರ ಖುರ್ಆನ್‌ನ ವ್ಯಾಖ್ಯಾನಕಾರರಾಗಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರ ನಿಧನದ ಕುರಿತು, ಮೌಲಾನಾ ಅಬ್ದುಲ್ ಮಜೀದ್ ಸಾಹಿಬ್ ಅವರು ನವೆಂಬರ್ 18, 1965 ರಂದು ಸಿದ್ಖೆ ಜೇದಿದ್ ಲಖ್ನೌ ಪತ್ರಿಕೆಯ ಪ್ರಕಟಣೆಯಲ್ಲಿ ಬರೆದಿದ್ದಾರೆ, ಅವರ ಇತರ ನಂಬಿಕೆಗಳು ಏನೇ ಆಗಿರಲಿ, ಪವಿತ್ರ ಖುರ್ಆನ್ ಮತ್ತು ಖುರ್ಆನ್‌ನ ಜ್ಞಾನದ ಸಾರ್ವತ್ರಿಕ ಪ್ರಕಟಣೆಯಲ್ಲಿ ಮತ್ತು ಅದರ ಸಾರ್ವತ್ರಿಕ ಪ್ರಚಾರದಲ್ಲಿ ಅವರು ದೀರ್ಘಾವಧಿಯ ಜೀವನದಲ್ಲಿ ಮಾಡಿರುವಂತಃ ಪ್ರಯತ್ನಗಳು ಹಾಗೂ ಚಟುವಟಿಕೆಗಳಿಗಾಗಿ ಸರ್ವಶಕ್ತನಾದ ಅಲ್ಲಾಹನು ಅವರಿಗೆ ಪ್ರತಿಫಲ ನೀಡಲಿ. ಇವರು ಸ್ವತಃ ಪವಿತ್ರ ಖುರ್ಆನ್‌ನ ವ್ಯಾಖ್ಯಾನಕಾರರುರಾಗಿದ್ದಾರೆ ಮತ್ತು ಈ ವಿಷಯವು ಅವರು ಮುಸ್ಲೆಹ್ ಮೌಊದ್(ರ) ಅವರ ಬಗ್ಗೆ ಬರೆದಿದ್ದಾರೆ. ಆದಾಗ್ಯೂ ಅವರು ಮುಂದೆ ಬರೆಯುತ್ತಾರೆ: ಅವರು ಪಾಂಡಿತ್ಯ ಪರಿಪೂರ್ಣತೆಯ ನಿಟ್ಟಿನಲ್ಲಿ ಅವರು ಪವಿತ್ರ ಖುರ್ಆನ್‌ನ ಸತ್ಯಾಸಂಗತಿಗಳು ಹಾಗೂ ಜ್ಞಾನದ ವ್ಯಖ್ಯಾನ ಹಾಗೂ ವಿವರಣೆಗಳು ಉನ್ನಟ ಮತ್ತು ವಿಶಿಷ್ಟ ಮಟ್ಟದ್ದಾಗಿದೆ. (ಮಾಸಿಕ ಪತ್ರಿಕೆ ಅನ್ನಾರುಲ್ಲಾಹ್, ಹಝ್ರತ್ ಮುಸ್ಲೆಹ್ ಮೌಊದ್(ರ) ವಿಶೇಶ ಸಂಚಿಕೆ, ಮೇ, ಜೂನ್, ಜುಲೈ 2009, ಪುಟ 879 ರಿಂದ ಆಯ್ದುಕೊಳ್ಳಲಾಗಿದೆ)

ಜ್ಞಾನವನ್ನು ಬಾಹ್ಯ ಮತ್ತು ಆಂತರಿಕ ಜ್ಞಾನದಿಂದ ತುಂಬಿಸುವುದಾಗಿ ಸರ್ವಶಕ್ತನಾದ ಅಲ್ಲಾಹನು ವಾಗ್ದಾನ ನೀಡಿದಾಗ, ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಕಾಲದಲ್ಲಿ ನಿಮ್ಮಂತಹ ದೈವಜ್ಞಾನ ಮತ್ತು ಜ್ಞಾನವನ್ನು ಯಾರು ಹೇಳಬಲ್ಲರು, ಆದರೆ ನಂತರ ಬರುವವರು ನಿಮ್ಮ ಜ್ಞಾನದಿಂದ ಸಹಭಾಗಿಗಾಗುತ್ತಾರೆ ಆಗಲೇ ಅವರು ಸರಿಯಾದ ಮಾರ್ಗವನ್ನು ಅನುಸರಿಸುವವರಾಗುತ್ತಾರೆ.

ಡಾಕ್ಟರ್ ಅಲ್ಲಾಮ ಮುಹಮ್ಮದ್ ಇಖ್ಬಾಲ್‌ರಿಗೆ ಸಂಬಂಧಪಟ್ಟ ದಾಖಲೆಗಳಲ್ಲಿ ಕೆಲವು ಸಂಗತಿಗಳಿವೆ. ಕ್ರಿ.ಶ. 1927, ಮಾರ್ಚ್ 24ರಂದು ಲಾಹೋರಿನಲ್ಲಿ ಒಂದು ಸಭೆ ನಡೆದಿತ್ತು. ಅಲ್ಲಾಮ ಇಖ್ಬಾಲ್ ಅದರ ಅಧ್ಯಕ್ಷರಾಗಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಅಲ್ಲಿ ಭಾಷಣ ಮಾಡಿದ್ದರು. ಅಲ್ಲಾಮ ಸಾಹಿಬ್ ಹೇಳಿದರು: ಬಹಳ ದೀರ್ಘ ಕಾಲದ ನಂತರ ಲಾಹೋರಿನಲ್ಲಿ ಇಂತಹ ಭಾಷಣವನ್ನು ಆಲಿಸಲು ಸಾಧ್ಯವಾಯಿತು. ವಿಶೇಷವಾಗಿ ಪವಿತ್ರ ಖುರ್ಆನಿನ ವಚನಗಳಿಂದ ಮಿರ್ಝಾ ಸಾಹಿಬ್ ನೀಡಿದ ವ್ಯಾಖ್ಯಾನ ಅತ್ಯಂತ ಉತ್ತಮವಾಗಿತ್ತು. ನನಗೆ ಈ ಭಾಷಣದಿಂದ ಲಭಿಸುತ್ತಿರುವ ಅನುಭೂತಿ ಹೊರಟುಹೋಗದೇ ಇರಲು ನಾನು ನನ್ನ ಭಾಷಣವನ್ನು ಹೆಚ್ಚು ವಿಸ್ತರಿಸಲು ಬಯಸುವುದಿಲ್ಲ. (ಅಲ್-ಫಝುಲ್, ಫೆಬ್ರವರಿ 15, 1999, ಪುಟ-6)

ಸೈಯದ್ ಅಬ್ದುಲ್ ಖಾದಿರ್ ಸಾಹಿಬ್ ಎಂಎ ಇತಿಹಾಸದ ಪ್ರಾಧ್ಯಾಪಕರಾಗಿದ್ದರು. ಲಾಹೋರ್‌ನ ಇಸ್ಲಾಮಿಯಾ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ಕ್ರಿ.ಶ. 1919ರಲ್ಲಿ ಲಾಹೋರಿನಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) "ಇಸ್ಲಾಮ್ ಮೇ ಇಖ್ತೆಲಾಫಾತ್ ಕಾ ಆಗ್ಗಾಝ್" (ಇಸ್ಲಾಮಿನಲ್ಲಿ ಭಿನ್ನತೆಯ ಆರಂಭ) ಎಂಬ ವಿಷಯದಲ್ಲಿ ಒಂದು ಮಹತ್ತಾದ ಲೆಕ್ಚರ್ ನೀಡಿದ್ದರು. ಲಾಹೋರಿನ ಇಸ್ಲಾಮಿಯಾ ಕಾಲೇಜಿನ ಪ್ರಾಂಶುಪಾಲರಾದ ಸಯ್ಯದ್ ಅಬ್ದುಲ್‌ಖಾದಿರ್ ಸಾಹಿಬ್ ತನ್ನ ಅಧ್ಯಕ್ಷ ಭಾಷಣದಲ್ಲಿ ಹೀಗೆ ಹೇಳಿದರು: ಈ ಭಾಷಣ ಅತ್ಯಂತ ಜ್ಞಾನಪರವಾಗಿದೆ. ನನಗೂ ಇಸ್ಲಾಮಿನ ಚರಿತ್ರೆಯ ಬಗ್ಗೆ ಸ್ವಲ್ಪ ಅರಿವಿದೆ. ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದ ಭಿನ್ನತೆಗಳ ಬಗ್ಗೆ ಆಳವಾಗಿ ಗೊತ್ತಿರುವ ಹಾಗೂ ಆ ವಿನಾಶಕಾರಿ ಮತ್ತು ಮೊದಲ ಆಂತರಿಕ ಪಿತೂರಿಯ ಕಾರಣಗಳನ್ನು ಗೊತ್ತು ಮಾಡಿರುವ ಚರಿತ್ರೆಗಾರರು ಮುಸ್ಲಿಮರಲ್ಲಿ ಮತ್ತು ಮುಸ್ಲಿಮೇತರರಲ್ಲಿ ಬಹಳ ಕಡಿಮೆ ಎಂದು ನಾನು ಧೈರ್ಯದಿಂದ ಹೇಳಬಲ್ಲೆನು. ಖಿಲಾಫತಿನ ಆಸ್ಥಾನ ದೀರ್ಘ ಕಾಲದ ವರೆಗೂ ಅಸ್ಥಿರವಾಗಲು ಕಾರಣವಾದ ಘಟನೆಗಳನ್ನು ಮಿರ್ಝಾ ಸಾಹಿಬ್‌ರು ಅತ್ಯಂತ ಸ್ಪಷ್ಟವಾಗಿ ಮತ್ತು ಸಲೀಸಾಗಿ ವಿವರಿಸಿದರು. ಇಂತಹ ತಾರ್ಕಿಕ ವಿಷಯವು ಮೊದಲೆಂದೂ ಇಸ್ಲಾಮಿನ ಚರಿತ್ರೆಯೊಂದಿಗೆ ಅಭಿರುಚಿ ಹೊಂದಿರುವ ಸಹೋದರರ ದೃಷ್ಟಿಯಲ್ಲಿ ಬಿದ್ದಿರಲಾರದು ಎಂದು ನಾನು ಹೇಳಬಲ್ಲೆ.

(ಅಲ್-ಫಝುಲ್, ಫೆಬ್ರವರಿ 15, 2002, ಪುಟ-13)

ಭಾರತದ ಮಂತ್ರಿ ಎಡ್ವಿನ್ ಸ್ಯಾಮ್ಯುಯೆಲ್ ಮೊಂಟಾಗು ಅವರು ಬ್ರಿಟಿಷ್ ಸಂಸತ್ತಿನಲ್ಲಿ ಭಾರತದ ರಾಜ್ಯ ಕಾರ್ಯದರ್ಶಿಯಾಗಿದ್ದರು, ಭಾರತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಿಗೆ ಜವಾಬ್ದಾರರಾಗಿದ್ದರು. ಭಾರತ-ಪಾಕಿಸ್ತಾನ ಅಥವಾ ಉಪಖಂಡವು ಬ್ರಿಟಿಷ್ ಸರ್ಕಾರದ ಅಡಿಯಲ್ಲಿದ್ದಾಗ, ಅವರು ಆ ಸಮಯದಲ್ಲಿ ಭಾರತದ ವ್ಯವಹಾರಗಳಲ್ಲಿ ಬ್ರಿಟಿಷ್ ಸಂಸತ್ತಿನಲ್ಲಿ ಭಾರತದ ರಾಜ್ಯ ಕಾರ್ಯದರ್ಶಿಯಾಗಿದ್ದರು. ಅವರು 1917 ಮತ್ತು 1918 ರಲ್ಲಿ ಈ ಹುದ್ದೆಯನ್ನು ಅಲಂಕರಿಸಿದರು. ಆ ದಿನಗಳಲ್ಲಿ, ಅವರು ಭಾರತದ ಪರಿಸ್ಥಿತಿಯನ್ನು ನಿರ್ಣಯಿಸಲು ಭಾರತದ ಪ್ರವಾಸ ಮಾಡಿದರು. ಆ ಸಂದರ್ಭದಲ್ಲಿ, ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಭಾರತದ ವ್ಯವಹಾರಗಳನ್ನು ಪರಿಹರಿಸುವ ಬಗ್ಗೆ ಸ್ಪಷ್ಟವಾದ ಮತ್ತು ವಿವರವಾದ ಮಾರ್ಗದರ್ಶನವನ್ನು ಅವರಿಗೆ ಸಂಬೋಧನೆಯ ರೂಪದಲ್ಲಿ ಕಳುಹಿಸಿದರು. ಅವರು ಭಾರತದ ಮಂತ್ರಿಯೂ ಆಗಿದ್ದರು. ಈ ಸಂಬೋಧನೆಯನ್ನು ಲಾಹೋರ್‌ನಲ್ಲಿ ಅವರಿಗೆ ಪ್ರಸ್ತುತಪಡಿಸಲಾಯಿತು, ಅದನ್ನು ಹಝ್ರತ್ ಸರ್ ಜಫರುಲ್ಲಾ ಖಾನ್ ಸಾಹಿಬ್ ಅವರು ಓದಿದರು. ಸ್ವತಃ ಹುಝೂರ್(ರ) ಕೂಡ ಸಚಿವರನ್ನು ಭೇಟಿಯಾಗಿ ಮಾರ್ಗದರ್ಶನ ನೀಡಿದರು. ಮೊಂಟಾಗು ಈ ಸಂಬೋಧನೆ ಮತ್ತು ಅದರ ವಿವರಗಳನ್ನು ಅವರ ಮರಣದ ನಂತರ An Indian Diary ಯ ಹೆಸರಲ್ಲಿ ಪ್ರಕಟಿಸಿದ ಅವರ ಡೈರಿಯಲ್ಲಿ ಗಮನಿಸಿದರು. ಅವರು ನವೆಂಬರ್ 15, 1917 ರ ದಿನಾಂಕದಲ್ಲಿ ಹೀಗೆ ದಾಖಲಿಸಿದ್ದಾರೆ: ನಾಲ್ಕನೇ ನಿಯೋಗವು ಅಹ್ಮದೀಯರದ್ದಾಗಿತ್ತು, ಇದು ಮುಸ್ಲಿಮರ ಒಂದು ಪಂಥವಾಗಿದೆ. ಅವರು ಮುಸ್ಲಿಮರು ಮತ್ತು ಮಾನವೀಯತೆಯ ಏಕತೆಯನ್ನು ನಂಬುತ್ತಾರೆ ಮತ್ತು ಎಲ್ಲಾ ಪ್ರವಾದಿಗಳನ್ನು ನಂಬುತ್ತಾರೆ. ಅವರು ಹುಝೂರ್‌ರು ಬರೆದ ಸುದೀರ್ಘ ದಾಖಲೆಯನ್ನು ಓದಿ ತಿಳಿಸಿದರು. ಈ ಡಾಕ್ಯುಮೆಂಟ್ ನಮಗೆ ಪ್ರಸ್ತುತಪಡಿಸಿದ ಎಲ್ಲಾ ದಾಖಲೆಗಳಿಗಿಂತ ಉತ್ತಮವಾಗಿದೆ. ಕಾರ್ಯಕಾರಿ ಮಂಡಳಿಯ ಸದಸ್ಯರ ಆಯ್ಕೆ ಮತ್ತು ಶಾಸನದ ಬಗ್ಗೆ ಎಲ್ಲಾ ನಿಯೋಗಗಳಿಂದ ಸಾಕಷ್ಟು ಚರ್ಚೆಯ ನಂತರ ಈ ದಾಖಲೆಯಲ್ಲಿನ ಪ್ರಸ್ತಾವನೆಗಳನ್ನು ಬಹಳ ಬುದ್ಧಿವಂತಿಕೆಯಿಂದ ಸಿದ್ಧಪಡಿಸಲಾಗಿದೆ.

ಅವರ ಮುಕ್ತಾಯದ ಟಿಪ್ಪಣಿಯ ಮೂಲ ಮಾತುಗಳು ಹೀಗಿವೆ: He has a good mind and carefully thought out his condtitutional Scheme. (ಅವರು ಒಳ್ಳೆಯ ಮನಸ್ಸನ್ನು ಹೊಂದಿದ್ದಾರೆ ಮತ್ತು ಅವರ ಸಾಂವಿಧಾನಿಕ ಯೋಜನೆಯನ್ನು ಎಚ್ಚರಿಕೆಯಿಂದ ಯೋಚಿಸಿದ್ದಾರೆ.) (ಅಲ್‌ಫಝುಲ್ ಇಂಟರ್‌ನ್ಯಾಷನಲ್, 18-27 ಫೆಬ್ರವರಿ 2020, ಪುಟ-54)

ಅವರು ಸ್ಪಷ್ಟ ಮನಸ್ಸನ್ನು ಹೊಂದಿದ್ದಾರೆ ಮತ್ತು ಅವರು ಬಹಳ ಕಾಳಜಿ ಮತ್ತು ಆಳದಿಂದ ಸಾಂವಿಧಾನಿಕ ಯೋಜನೆಯನ್ನು ನೀಡಿದ್ದಾರೆ.

ಈ ಒಬ್ಬ ಸುಶಿಕ್ಷಿತ ರಾಜಕಾರಣಿಯಾಗಿದ್ದಾನೆ ಆತನು ಲೌಕಿಕ ಅಶಿಕ್ಷಿತ ವ್ಯಕ್ತಿಯ ಬಗ್ಗೆ ಮಾತನಾಡುತ್ತಿದ್ದಾನೆ. ಸರ್ವಶಕ್ತನಾದ ಅಲ್ಲಾಹನು ಅವರನ್ನು ಬಾಹ್ಯ ವಿಜ್ಞಾನಗಳಿಂದ ತುಂಬಿಸಿದ್ದಾನೆ ಎಂದು ಭವಿಷ್ಯ ನುಡಿಯುವುದು ಏಕೆ ಆಗಬಾರದು.

ಚೌಧರಿ ಮುಹಮ್ಮದ್ ಅಕ್ತರ್ ಖಾನ್ ಭಟ್ಟಿ ಸಾಹಿಬ್, ಅಡ್ವೊಕೇಟ್

ಹೈಕೋರ್ಟ್ ಹೇಳುತ್ತಾರೆ: "ಒಂದು ಘಟನೆಯನ್ನು ಹೇಳುವುದು ಇಲ್ಲಿ ಸೂಕ್ತವೆನಿಸುತ್ತಿದೆ. ಅದೇನೆಂದರೆ ಒಂದುಪಾರಿಸ್ ಎಂಬ ಸಾಪ್ತಾಹಿಕ ನಿಯತಕಾಲಿಕೆ ಇತ್ತು, ಅದರ ಸಂಪಾದಕರಾದ ಲಾಲಾ ಕರಮ್ ಅವರು ಖಾದಿಯಾನ್ ವಾರ್ಷಿಕ ಸಮ್ಮೇಳನದಲ್ಲಿ ಪತ್ರಿಕೆಗಳ ನಿಯೋಗದೊಂದಿಗೆ ಕೆಲವು ಬಾರಿ ಭಾಗವಹಿಸಿದ್ದರು. ಅಲ್ಲಿಂದ ಹಿಂತಿರುಗಿ ಬರುವಾಗ ಮಿರ್ಝಾ ಬಶೀರುದ್ದೀನ್ ಮಹಮೂದ್ ಅವರ ನಾಯಕತ್ವ, ಸಮಗ್ರತೆ, ವ್ಯಕ್ತಿತ್ವವನ್ನು ಒಂದರ ಹಿಂದೆ ಒಂದರಂತೆ ಹಲವು ಲೇಖನಗಳಲ್ಲಿ ಪ್ರಸ್ತಾಪಿಸಿ ಎದುರಾಳಿಗಳನ್ನು ಕೆಣಕಿದರು. ಅವರು ನನಗೆ ಹೇಳಲು ಪ್ರಾರಂಭಿಸಿದರು. ನಾವು ಝಫರುಲ್ಲಾ ಅವರನ್ನು ಮಹಾನ್ ವ್ಯಕ್ತಿ ಎಂದು ಪರಿಗಣಿಸಿದ್ದೇವೆ. (ಆ ದಿನಗಳಲ್ಲಿ ಸರ್ ಝಫರುಲ್ಲಾ ಅವರು ವೈಸರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲ್ ಸದಸ್ಯರಾಗಿದ್ದರು) ಆದರೆ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಸಾಹಿಬ್ ಅವರ ಮುಂದೆ ಅವರ ಸ್ಥಿತಿ, ಅಂದರೆ ಝಫರುಲ್ಲಾ ಖಾನ್ ಸಾಹಿಬ್ ಅವರ ಸ್ಥಿತಿ ಶಾಲೆಯ ಮಗುವಿನ ಸ್ಥಿತಿಯಾಗಿದೆ. ಅವರು ಪ್ರತಿ ವಿಷಯದಲ್ಲೂ ಅವರಿಗಿಂತ ಉತ್ತಮ ಅಭಿಪ್ರಾಯವನ್ನು ಹೊಂದಿದ್ದಾರೆ" ಅಂದರೆ ಹಝ್ರತ್ ಮಿರ್ಝಾ ಬಶಿರುದ್ದೀನ್ ಮಹಮೂದ್ ಅಹ್ಮದ್ ಸಾಹಿಬ್(ರ) ಅವರು ಪ್ರತಿ ವಿಷಯದಲ್ಲೂ ಝಫರುಲ್ಲಾ ಖಾನ್ ಸಾಹಿಬ್(ರ) ಅವರಿಗಿಂತ ಉತ್ತಮ ಅಭಿಪ್ರಾಯವನ್ನು ಹೊಂದಿದ್ದಾರೆ" ಮತ್ತು ಅತ್ಯುತ್ತಮ ವಾದಗಳನ್ನು ಪ್ರಸ್ತುತಪಡಿಸುತ್ತಾರೆ.. ಇದು ಅಗಾಧವಾದ ಸಂಘಟನಾ ಸಾಮರ್ಥ್ಯವನ್ನು ಹೊಂದಿದೆ. ಅಂತಹ ಮನುಷ್ಯ ಸುಲಭವಾಗಿ ರಾಜ್ಯವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುತ್ತಾನೆ... ದೇಶ ವಿಭಜನೆಯ ನಂತರ ಮಿರ್ಝಾ ಬಶೀರುದ್ದೀನ್ ಮಹ್ಮದ್ ಅಹ್ಮದ್ ಸಾಹಿಬ್ ಲಾಹೋರ್‌ನ ಕಾನೂನು ಕಾಲೇಜಿನಲ್ಲಿ ದೇಶದ ಅಭಿವೃದ್ಧಿಯ ನಿರೀಕ್ಷೆಗಳ ಕುರಿತು ಕೆಲವು ಭಾಷಣಗಳನ್ನು ನೀಡಿದರು. ಈ ಭಾಷಣಗಳಲ್ಲಿ ಅವರು ವಿಶ್ವವಿದ್ಯಾನಿಲಯದ ಪ್ರತಿಷ್ಠಿತ ಉಪನ್ಯಾಸಕರಂತೆ ನಕ್ಷೆಗಳು, ಕಪ್ಪು ಹಲಗೆಗಳು ಮತ್ತು ಗ್ರಾಫ್‌ಗಳ ಸಹಾಯದಿಂದ ಕೆಲವು ಅಂಶಗಳನ್ನು ವಿವರಿಸಿದರು. "ನನಗೆ ಒಂದು ಅಂಶ ನೆನಪಿದೆ" ಎಂದು ಬರಹಗಾರ ಹೇಳುತ್ತಾರೆ, "ನನಗೆ ಒಂದು ಅಂಶ ನೆನಪಿದೆ," ಅವರು ಹೇಳಿದರು, ಪಕ್ಕದಲ್ಲಿ ಇದೆ. "ದೌರ್ಭಾಗ್ಯವಶಾತ್ ದೇಶ ವಿಭಜನೆಯ ಮುಂಚೆ ಭಾರತದ ಕರಾವಳಿ ಪ್ರದೇಶದಲ್ಲಿರುವ ಆ ದ್ವೀಪಗಳ ಕಡೆ ಗಮನ ಹರಿಸಲಿಲ್ಲ. ಲಕಾದೀಪ ಮತ್ತು ಸರನ್ದೀಪ್, ಬಲದೀಪ್ ಇತ್ಯಾದಿಗಳು. ಈ ಕರಾವಳಿ ದ್ವೀಪಗಳ ಜನಸಂಖ್ಯೆಯು ಹೆಚ್ಚಾಗಿ ಮುಸ್ಲಿಮರ ಮೇಲೆ ಅವಲಂಬಿತವಾಗಿದೆ ಮತ್ತು ರಕ್ಷಣೆಯ ದೃಷ್ಟಿಯಿಂದ ಅವರ ಪ್ರಾಮುಖ್ಯತೆ ತುಂಬಾ ಹೆಚ್ಚಾಗಿದೆ. ಭಾಷಣಗಳನ್ನು ಕೇಳಿದ ನಂತರ, ಸಭಿಕರಲ್ಲಿ ಸಾಮಾನ್ಯ ಅನಿಸಿಕೆ ಏನೆಂದರೆ, ವಿಭಜನೆಯ ಪ್ರಕ್ರಿಯೆಯಲ್ಲಿ ಖಲೀಫಾ ಸಾಹಿಬ್ ಅವರ ಸಹಕಾರವನ್ನು ಪಡೆಯಬಹುದಿತ್ತು ಎಂದು ಅವರು ಬಯಸುತ್ತಾರೆ. ಅನಾವಶ್ಯಕ ಮತಾಂಧತೆ ಮತ್ತು ಸ್ವಯಂ ಭ್ರಮೆಯಿಂದ ಮಿರ್ಝಾ ಬಶೀರ್-ಉದ್-ದೀನ್ ಮಹಮೂದ್ ಅಹ್ಮದ್ ಅವರ ದೇವರು ನೀಡಿದ ಪ್ರತಿಭೆಯಿಂದ ರಾಷ್ಟ್ರಮಟ್ಟದಲ್ಲಿ ಪ್ರಯೋಜನ ಪಡೆಯುವ ಅವಕಾಶವನ್ನು ಕಳೆದುಕೊಂಡಿತು... ನ್ಯಾಯಾಧೀಶರು ಖಾಸಗಿಯಾಗಿ ಒಪ್ಪಿಕೊಂಡರು, ಅವರ ಎಲ್ಲಾ ಶ್ರೇಷ್ಠತೆಯ ಹೊರತಾಗಿಯೂ, ಅವರು ತಿಳಿದಿರಲಿಲ್ಲ. ಈ ಅಲೌಕಿಕ ಸಮಸ್ಯೆಗಳು ಯಾವುದೇ ಪರಿಚಯ ಇರಲಿಲ್ಲ. ಮಿರ್ಝಾ ಮಹಮೂದ್ ಅಹ್ಮದ್ ಅವರ ವಿವರಣೆಯನ್ನು ಕೇಳಿದ ನಂತರ, ಅವರ ಹದಿನಾಲ್ಕು ತರಗತಿಗಳು ಜ್ಞಾನೋದಯವಾದವು ಮತ್ತು ಮೊದಲ ಬಾರಿಗೆ ಅವರು ಇಸ್ಲಾಮಿಕ್ ವಿಚಾರಗಳ ಸರಿಯಾದ ಜ್ಞಾನವನ್ನು ಪಡೆದರು. (ಅಲ್-ಫಝುಲ್ ಇಂಟರ್‌ನ್ಯಾಶನಲ್ 16 ರಿಂದ 22 ಫೆಬ್ರವರಿ 2018, ಪುಟ 3)

ಹಾಗಾಗಿ ಪಾಕಿಸ್ತಾನದ ಅಸ್ತಿತ್ವದ ಸ್ಥಾಪನೆಗೆ ಮೊದಲು ಮತ್ತು ನಂತರ ಅತ್ಯುನ್ನತ ಅಭಿಪ್ರಾಯವನ್ನು ನೀಡಿ ವಿದ್ಯಾವಂತರ ಮನಸ್ಸನ್ನು ಬೆಳಗಿಸಿದವರು ಹಝ್ರತ್ ಮುಸ್ಲೇಹ್ ಮೌಊದ್(ರ) ಆಗಿದ್ದಾರೆ. ಇಂದ್ರಿಯಗಳು ಅವರನ್ನು ಮರೆತವು. ಅವರು ಇದನ್ನು ಮರೆತು, ಈ ವಿಷಯಗಳ ಬಗ್ಗೆ ನಮಗೆ ತಿಳಿದಿಲ್ಲ ಎಂದು ಅವರು ತಮ್ಮನ್ನು ತಾವು ಶಾಲಾ ಮಕ್ಕಳ ರೀತಿಯಲ್ಲಿ ಭಾವಿಸಲು ಪ್ರಾರಂಭಿಸಿದರು.

ಅಲ್-ಇಮ್ರಾನ್ ಡಮಾಸ್ಕಸ್ ಪತ್ರಿಕೆ, ಹಝ್ರತ್ ಮುಸ್ಲೆಹ್ ಮೌಊದ್(ರ) ಅಲ್ಲಿಗೆ ಭೇಟಿ ನೀಡಿದಾಗ, ಆಗಸ್ಟ್ 10, 1924 ರಂದು, "ಮಫ್ದಿ ದಮಿಶ್ಕ್‌ನಲ್ಲಿ" ಎಂಬ ಶೀರ್ಷಿಕೆಯಡಿಯಲ್ಲಿ ಬರೆಯುತ್ತಾನೆ, "ನೀವು ದಾರುಲ್‌ಖಿಲಾಫಾದಲ್ಲಿ ಆಗಮನದ ಸುದ್ದಿ ಪ್ರಕಟವಾದಾಗ ಅಲ್ಲಿದ್ದ ಅನೇಕ ವಿದ್ವಾಂಸರು ಮತ್ತು ಗಣ್ಯರು "ನಿಮ್ಮೊಂದಿಗೆ ಮಾತನಾಡಲು ಮತ್ತು ನಿಮ್ಮ ಆಹ್ವಾನದ ಬಗ್ಗೆ ನಿಮ್ಮೊಂದಿಗೆ ಚರ್ಚೆ ಮಾಡಲು ನಿಮ್ಮ ಸೇವೆಗೆ ಬಂದರು" ಮತ್ತು ನಂತರ ಏನಾಯಿತು ಎಂದು ಲೇಖಕರು ಹೇಳುತ್ತಾರೆ, ಮತ್ತು ಅವರೆಲ್ಲರು ನಿಮಗೆ ಬಹಳ ಆಳವಾದ ಸಂಶೋಧನಾ ವಿದ್ವಾಂಸರು ಮತ್ತು ಎಲ್ಲಾ ಧರ್ಮಗಳು ಮತ್ತು ಅವುಗಳ ಇತಿಹಾಸ ಮತ್ತು ತತ್ವಶಾಸ್ತ್ರದ ಆಳವಾದ ಅಧ್ಯಯನವನ್ನು ಹೊಂದಿರುವ ವ್ಯಕ್ತಿ ಮತ್ತು ದೈವಿಕ ಕಾನೂನಿನ (ಪವಿತ್ರ ಖುರ್‌ಆನ್‌ನ) ಬುದ್ಧಿವಂತಿಕೆ ಮತ್ತು ತತ್ವಶಾಸ್ತ್ರದ ಬಗ್ಗೆ ಪರಿಚಿತರಾಗಿದ್ದಾರೆ ಎಂದು ಕಂಡುಕೊಂಡರು." (ಅಲ್‌ಫಝುಲ್, 17-02-1972, ಪುಟ-10) ಇದು ಒಂದು ಅರಬ್ ಪತ್ರಿಕೆಯ ಅಭಿಪ್ರಾಯವಾಗಿದೆ.

ಇಸ್ರೇಲ್ ಸ್ಥಾಪನೆಯ ಯೋಜನೆ ಸಮಯದಲ್ಲಿ ಮತ್ತು ನಂತರ ಸ್ಥಾಪನೆಗೆ ಯೋಜಿಸುತ್ತಿರುವಾಗ ಮತ್ತು ಅದರ ಸ್ಥಾಪನೆಯ ನಂತರವೂ ಅವರು ಮುಸ್ಲಿಮರಿಗೆ ಧಾರ್ಮಿಕ ಮತ್ತು ಐತಿಹಾಸಿಕ ಸಂದರ್ಭದಲ್ಲಿ ಸತ್ಯಗಳನ್ನು ಹೇಳುವ ಮೂಲಕ ಎಚ್ಚರಿಸಲು ಪ್ರಯತ್ನಿಸಿದರು. ನಂತರವೂ ಅದನ್ನೇ ಮುಂದುವರಿಸಿದರು. ಈ ನಿಟ್ಟಿನಲ್ಲಿ, ಅವರು "ಅಲ್ ಕುಫ್ರು ಮಿಲ್ಲತುವ್ವಾಹಿದ" ಎಂಬ ಲೇಖನವನ್ನು ಬರೆದಿದ್ದಾರೆ. ಮತ್ತು ಅದನ್ನು ಅರೇಬಿಕ್ ಭಾಷೆಗೆ ಭಾಷಾಂತರಿಸುವ ಮೂಲಕ, ಅರಬ್ಬರ ತನಕ ತಲುಪಿಸಲಾಯಿತು. ಮತ್ತು ಅರಬ್ಬರು ಮತ್ತು ಮುಸ್ಲಿಂ ಜಗತ್ತಿಗೆ ಜಾಗರೂಕರಾಗಿರಿ ಎಂದು ಹೇಳಿದರು. ಈ ಲೇಖನವನ್ನು ಅನೇಕ ಅರಬ್ ಪತ್ರಿಕೆಗಳು ವಿವರಿಸಿವೆ ಮತ್ತು ಪ್ರಶಂಸಿಸಿದೆ.

ಹಝ್ರತ್ ಮುಸ್ಲಿಹ್ ಮೌಊದ್(ರ)ರವರು ಅದರಲ್ಲಿ ನಿಮ್ಮ ಕಳವಳಗಳನ್ನು ವ್ಯಕ್ತಪಡಿಸಿದ್ದರು, ಮತ್ತು ನೀವು ವ್ಯಕ್ತಪಡಿಸಿದ ಫಲಿತಾಂಶಗಳನ್ನು ಪ್ರಸ್ತುತ ಕಾಲದಲ್ಲಿ ನಾವು ನೋಡುತ್ತಿದ್ದೇವೆ. ಮತ್ತು ಇಂದು ನೀವು ಯುದ್ಧದಲ್ಲಿ ವಿವರಿಸಿದ್ದನ್ನು ನಾವು ನೋಡುತ್ತಿದ್ದೇವೆ. ಮುಸ್ಲಿಮರು ಅಂದು ಗಮನಹರಿಸಬೇಕು ಮತ್ತು ಇಂದಿಗೂ ಗಮನ ಹರಿಸಲಿ ಎಂದು ನಾನು ಬಯಸುತ್ತೇನೆ.

ಈ ಬಗ್ಗೆ ಬಗ್ದಾದ್‌ನ ಒಂದು ಪತ್ರಿಕೆ ಅಲ್-ಶೂರಾ, ಅದು ಜೂನ್ 18, 1948 ರ ಪತ್ರಿಕೆಯಲ್ಲಿ ವಿವರವಾಗಿ ಬರೆದಿದೆ. ಅಂತೆಯೇ, ಡಮಾಸ್ಕಸ್‌ನಲ್ಲಿ ಪ್ರಕಟವಾದ "ಅಲಿಫ್ ಬಾ" ಪತ್ರಿಕೆ ಕೂಡ ಈ ಲೇಖನವನ್ನು ಮೆಚ್ಚಿದೆ.

ಈ ಲೇಖನವನ್ನು ಪ್ರತಿಯೊಬ್ಬ ಅಹ್ಮದಿಯೂ ಓದಲೇಬೇಕು, ಅವರ ಜ್ಞಾನವನ್ನು ಬಹಳಷ್ಟು ಹೆಚ್ಚಿಸುತ್ತದೆ. (ತಾರೀಖ್ ಅಹ್ಮದೀಯತ್, ಸಂಪುಟ-12, ಪುಟಗಳು 393, 391)

ಸರ್ದಾರ್ ಶೌಕತ್ ಹಯಾತ್ ಖಾನ್ ಸಾಹಿಬ್ ಭಾರತದ ಈ ಸ್ವಾತಂತ್ರ್ಯ ಹೋರಾಟದ ಪ್ರಮುಖ ಸದಸ್ಯರಾಗಿದ್ದರು. The Nation that Lost its soul' ಪುಸ್ತಕದಲ್ಲಿ ಬರೆದಿದ್ದಾರೆ: ಒಂದು ದಿನ ನನಗೆ ಖಾಯೆದ್ ಆಝುಮ್ ಅವರಿಂದ ಸಂದೇಶ ಬಂದಿತು. (ಖಾಯೆದ್-ಎ-ಆಝುಮ್‌ನ ಸಂದೇಶ ಹೀಗಿತ್ತು) ಶೌಕತ್, ನೀವು ಖಾದಿಯಾನ್‌ನಿಂದ ಐದು ಮೈಲಿ ದೂರದಲ್ಲಿರುವ ಬಟಾಲೆಗೆ ಹೋಗುತ್ತಿದ್ದೀರಿ ಎಂದು ನನಗೆ ತಿಳಿದಿದೆ. ನೀವು ಅಲ್ಲಿಗೆ ಹೋಗಿ ಹಝ್ರತ್ ಸಾಹಿಬ್ ಅವರ ಉತ್ತಮ ಪ್ರಾರ್ಥನೆಗಳನ್ನು ಮತ್ತು ಪಾಕಿಸ್ತಾನದ ಸಾಧನೆಗೆ ಬೆಂಬಲವನ್ನು ನೀಡುವಂತೆ ನನ್ನ ವಿನಂತಿಯನ್ನು ತಿಳಿಸುತ್ತೀರಿ. ಅವರು ಹೇಳುತ್ತಾರೆ ನಾನು ಜಲ್ಸಾದ ಅಂತ್ಯದ ನಂತರ ನಾನು ಮಧ್ಯರಾತ್ರಿಯ ಸುಮಾರಿಗೆ ಖಾದಿಯಾನ್‌ಗೆ ತಲುಪಿದೆ. ಹಝ್ರತ್ ಸಾಹಿಬ್ ವಿಶ್ರಾಂತಿ ಪಡೆಯುತ್ತಿದ್ದರು. ನಾನು ಖಾಯೆದ್ ಆಝುಮ್‌ನ ಸಂದೇಶದೊಂದಿಗೆ ಬಂದಿದ್ದೇನೆ ಎಂಬ ಸಂದೇಶವನ್ನು ಅವರಿಗೆ ತಲುಪಿಸಿದೆ. ಅವರು ಅದೇ ಸಮಯದಲ್ಲಿ ಕೆಳಗಿಳಿದು ಖಾಯೆದ್ ಎ ಆಝುಮ್‌ನ ಆದೇಶಗಳು ಯಾವುವು? ಅದಕ್ಕೆ ನಾನು ಅವರಿಗೆ ನಿಮ್ಮ ಪ್ರಾರ್ಥನೆ ಮತ್ತು ಬೆಂಬಲ ಬೇಕು ಎಂದು ಹೇಳಿದ್ದಾರೆ ಎಂದು ತಿಳಿಸಿದೆ. ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಮೊದಲಿನಿಂದಲೂ ಅವರ ಮಿಷನ್‌ಗಾಗಿ ಪ್ರಾರ್ಥಿಸುತ್ತಿದ್ದಾರೆ ಮತ್ತು ಅವರ ಅನುಯಾಯಿಗಳಿಗೆ ಸಂಬಂಧಿಸಿದಂತೆ, ಅಂದರೆ ಅಹ್ಮದಿಗಳು. ಅವರಲ್ಲಿ ಯಾರೂ ಮುಸ್ಲಿಂ ಲೀಗ್ ವಿರುದ್ಧ ಚುನಾವಣೆಯಲ್ಲಿ ನಿಲ್ಲುವುದಿಲ್ಲ ಮತ್ತು ಯಾರಾದರೂ ದ್ರೋಹ ಮಾಡಿದರೆ, ಅವರು ತಮ್ಮ ಪಕ್ಷದ ಬೆಂಬಲವನ್ನು ಕಳೆದುಕೊಳ್ಳುತ್ತಾರೆ. ನಿಂತರೂ ಜಮಾತ್ ಅಹಮದಿಯಾದ ಪರವಾಗಿ ನಿಲ್ಲುತ್ತಾರೆ. ಆದರೆ, ನಾವು ಮುಸ್ಲಿಂ ಲೀಗ್ ಅಭ್ಯರ್ಥಿಯನ್ನು ಬೆಂಬಲಿಸುತ್ತೇವೆ. ಈ ಸಭೆಯ ಪರಿಣಾಮವಾಗಿ, ಮುಮ್ತಾಜ್ ದೌಲ್ತಾನಾ ಸಾಹಿಬ್ ಅವರು ಸಿಯಾಲ್ಕೋಟ್ ಕ್ಷೇತ್ರದಲ್ಲಿ ಅಹಮದಿ ನವಾಬ್ ಮುಹಮ್ಮದ್ ದಿನ್ ಸಾಹಿಬ್ ಅವರನ್ನು ಭಾರಿ ಬಹುಮತದಿಂದ ಸೋಲಿಸಿದರು. ಶೌಕತ್ ಹಯಾತ್ ಸಾಹಿಬ್ ಬರೆಯುತ್ತಾರೆ, ಖಾದಿಯಾನಿ ಜನರು ಮುಹಮ್ಮದ್ ದೀನ್ ಬದಲಿಗೆ ಮುಮ್ತಾಜ್ ಅವರಿಗೆ ತಮ್ಮ ಅಮೀರ್ ಆದೇಶವನ್ನು ಅನುಸರಿಸಿ ಮತ ಚಲಾಯಿಸಿದರು ಮತ್ತು ಈ ಮುಮ್ತಾಜ್ ದೌಲ್ತಾನಾ ಸಾಹಿಬ್ ಅವರು 1953 ರಲ್ಲಿ ತಮ್ಮ ಸರ್ಕಾರದಲ್ಲಿ ಅಹ್ಮದೀಯರ ವಿರುದ್ಧ ಮತ್ತೆ ಕ್ರಮ ಕೈಗೊಂಡವರು. ಅಹ್ಮದಿಯರು ಈ ಜನರನ್ನು ಅವರು ಬಯಸಿದಷ್ಟು ಬೆಂಬಲಿಸುವುದನ್ನು ಮುಂದುವರೆಸುತ್ತಾರೆ, ಆದರೆ ಈ ಜನರು ಎಂದಿಗೂ ಕುಟುಕುವುದನ್ನು ನಿಲ್ಲಿಸುವುದಿಲ್ಲ. ಶೌಕತ್ ಹಯಾತ್ ಮತ್ತಷ್ಟು ಬರೆಯುತ್ತಾರೆ. ನಾನು ಪಠಾಣ್‌ಕೋಟ್ ತಲುಪಿದಾಗ

ಖಾಯೆದ್ ಎ ಆಝುಮ್ ಮೌಲಾನಾ ಮೌದುದಿ ಸಾಹಿಬ್‌ರನ್ನು ಭೇಟಿಯಾಗಲು ಆದೇಶಿಸಿದರು. ಅವರು ಚೌಧರಿ ನಿಯಾಜ್ ಅವರ ಗ್ರಾಮಕ್ಕೆ ಹೊಂದಿಕೊಂಡ ತೋಟದಲ್ಲಿ ವಾಸಿಸುತ್ತಿದ್ದರು. ಮೌಲಾನಾ ಮೌದುದಿ ಸಾಹಿಬ್ ಅವರಿಗೆ ಖಾಯೆದೆ ಆಝುಮ್ ಅವರ ಸಂದೇಶವನ್ನು ನಾನು ಅವರಿಗೆ ತಿಳಿಸಿದಾಗ, ಅವರು ಪಾಕಿಸ್ತಾನಕ್ಕಾಗಿ ಪ್ರಾರ್ಥಿಸಬೇಕು ಮತ್ತು ನಮ್ಮನ್ನು ಬೆಂಬಲಿಸಬೇಕು ಎಂದು ಹೇಳಿದಾಗ, ಅವರು "ನಾ-ಪಾಕಿಸ್ತಾನ" ಎಂದರೆ ಅಪವಿತ್ರ ಸ್ಥಳಕ್ಕೆ ಹೇಗೆ ಪ್ರಾರ್ಥಿಸಬೇಕು ಎಂದು ಉತ್ತರಿಸಿದರು. ಹಿಂದುಸ್ತಾನದ ಪ್ರತಿಯೊಬ್ಬ ವ್ಯಕ್ತಿಯು ಮುಸ್ಲಿಮ್ ಆಗುವವರೆಗೆ ಪಾಕಿಸ್ತಾನವು ಹೇಗೆ ಆಗುವುದು. ಜಮಾಅತೆ ಇಸ್ಲಾಮಿಯ ನಾಯಕನ ಈ ನಿಲುವು ಆಗಿತ್ತು ಅಂದರೆ ಪಾಕಿಸ್ತಾನವು ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲ. (ಸರ್ದಾರ್ ಶೌಕತ್ ಹಯಾತ್, ಜಂಗ್ ಪಬ್ಲಿಷರ್ಸ್, ಪುಟ 195, ಡಿಸೆಂಬರ್ 1, 1995 ರಂದು ಪ್ರಕಟವಾದ ದಿ ಲಾಸ್ಟ್ ನೇಷನ್ ನಿಂದ ಆಯ್ದುಕೊಳ್ಳಲಾಗಿದೆ)

ಅಂದರೆ ಅವರ ಸಿದ್ಧಾಂತದ ಪ್ರಕಾರ ಇವತ್ತಿನವರೆಗೂ ಅಸ್ತಿತ್ವಕ್ಕೆ ಬರಬಾರದಿತ್ತು. ಜಮಾತ್-ಎ-ಇಸ್ಲಾಮಿಯ ನಾಯಕ ಸರ್ದಾರ್ ಶೌಕತ್ ಹಯಾತ್ ಅವರ ಈ ದೃಷ್ಟಿಕೋನವು ಜಮಾತೆ ಇಸ್ಲಾಮಿಯ ನಾಯಕನ ದೃಷ್ಟಿಕೋನವಾಗಿದೆ ಎಂದು ಬರೆಯುತ್ತಾರೆ. ಮತ್ತೊಂದೆಡೆ, ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಅವರ ದೃಷ್ಟಿಕೋನವನ್ನು ನೋಡಿ. ಈ ರಾಜಕಾರಣಿಗಳು ಮತ್ತು ಇತಿಹಾಸದ ಅರಿವಿಲ್ಲದ ಪಂಡಿತರ ದೃಷ್ಟಿಯಲ್ಲಿ ಇಂದು ಅಹಮದೀಯರು ದೇಶಕ್ಕೆ ಶತ್ರುಗಳಾಗಿದ್ದಾರೆ. ದೇಶ ಇರುವಾಗ ದೇಶಕ್ಕಾಗಿ ಎಲ್ಲಾ ತ್ಯಾಗಕ್ಕೂ ಸಿದ್ಧರಿದ್ದರು ಮತ್ತು ಇಂದಿಗೂ ಸಿದ್ಧರಿದ್ದಾರೆ ಮತ್ತು ನಿರ್ಮಾಣದ ವಿರುದ್ಧ ಈ ದೇಶ ದೇಶದ ಗುತ್ತಿಗೆದಾರರಾಗಿ ಕುಳಿತಿದ್ದಾರೆ ಅಲ್ಲಾಹನು ಈ ದಬ್ಬಾಳಿಕೆಗಾರರಿಂದ ಶೀಘ್ರವಾಗಿ ದೇಶವನ್ನು ಬಿಡುಗಡೆ ಮಾಡಲಿ.

ಮತ್ತೆ ಹಝ್ರತ್ ಮುಸ್ಲಿಹ್ ಮೌಊದ್(ರ)ರವರು ಮುಸ್ಲಿಮರ ನೋವು ಇಟ್ಟುಕೊಂಡು ಮತ್ತೊಂದು ಸಾಧನೆ ಇದೆ. 1923 ರಲ್ಲಿ, ಅವರು ಶುದ್ಧಿ ಆಂದೋಲನದ ವಿರುದ್ಧ ಜಿಹಾದ್ ಪ್ರಾರಂಭಿಸಿದರು. ಅದೇನೆಂದರೆ, ಹಿಂದೂಕರಣ ಚಳುವಳಿಯು ಶ್ರದ್ಧಾನಂದ ಎಂಬ ಹಿಂದೂ ನಾಯಕನಿಂದ ಭಾರತದಲ್ಲಿ ಪೂರ್ವಜರು ಹಿಂದೂಗಳಾಗಿದ್ದ ಮುಸ್ಲಿಮರನ್ನು ಮರು-ಹಿಂದೂಗಳಿಸಲು ಪ್ರಾರಂಭಿಸಿದ ಚಳುವಳಿಯಾಗಿದೆ. ಮಲ್ಕಾನಾ ಪ್ರದೇಶಕ್ಕೆ ಒಂದರ ಹಿಂದೆ ಒಂದರಂತೆ ಗೌರವ ಪ್ರಚಾರಕರ ನಿಯೋಗಗಳನ್ನು ಕಳುಹಿಸಿದರು.

ಈ ನಿಟ್ಟಿನಲ್ಲಿ, ಮಾರ್ಚ್ 29, 1923 ರ ಪ್ರಕಟಣೆಯಲ್ಲಿ ಮಶ್ರಿಕ್ ಗೋರಖ್‌ಪುರ್ ಪತ್ರಿಕೆಯು "ಅಹ್ಮದೀಯ ಜಮಾತ್‌ನ ಇಮಾಮ್ ಮತ್ತು ಪೇಶ್ವಗಳ ನಿರಂತರ ಭಾಷಣಗಳು ಮತ್ತು ಬರಹಗಳು ಅವರ ಅನುಯಾಯಿಗಳ ಮೇಲೆ ಬಹಳ ಆಳವಾದ ಪ್ರಭಾವ ಬೀರಿದೆ ಮತ್ತು ಈ ಸಮಯದಲ್ಲಿ ಈ ಪಂಥವು ಈ ಜಿಹಾದ್‌ನ ಮುಂಚೂಣಿಯಲ್ಲಿ ಕಂಡುಬರುತ್ತದೆ ಮತ್ತು ಇದರ ಹೊರತಾಗಿಯೂ, ಅಹ್ಮದಿ ಪಂಥದ ಪ್ರಕಾರ, ಈ ನವ-ಮುಸ್ಲಿಮರ ಗುಂಪನ್ನು ಬೆಂಬಲಿಸುವ ಅಗತ್ಯವಿಲ್ಲ ಏಕೆಂದರೆ ಅದು ಈ ಪಂಥದೊಂದಿಗೆ ಯಾವುದೇ ಸಂಬಂಧವನ್ನು ಹೊಂದಿಲ್ಲ, ಆದರೆ ಇಸ್ಲಾಂನ ಹೆಸರನ್ನು ಅದಕ್ಕೆ ಲಗತ್ತಿಸಲಾಗಿದೆ, ಆದ್ದರಿಂದ, ಅದರ ಅವಮಾನದಿಂದ, ಅಂದರೆ ಇಸ್ಲಾಂ ಹೆಸರಿನ ಅವಮಾನದಿಂದ "ಅಹ್ಮದೀಯ ಜಮಾತ್‌ನ ಇಮಾಮ್ ಇಸ್ಲಾಮಿನ ಹೆಸರಿನ ಅವಮಾನದಿಂದ ಉತ್ಸುಕರಾದರು ಮತ್ತು ಅವರ ಕೆಲವು ಭಾಷಣಗಳನ್ನು ನೋಡಿದ ನಂತರ, ಅಲ್ಲಾಹನ ಹೆಸರಿನಲ್ಲಿ ಜೀವ ನೀಡುವವರು ಇನ್ನೂ ಜೀವಂತವಾಗಿದ್ದಾರೆ ಎಂಬುದು ಬಹಳ ವಿಸ್ಮಯಕಾರಿಯಾಗಿದೆ. ಮತ್ತು ನಮ್ಮ ವಿದ್ವಾಂಸರು ಅಹ್ಮದೀಯ ಜಮಾತ್ ತನ್ನ ನಂಬಿಕೆಗಳನ್ನು ಬೋಧಿಸಿದರೆ, ಅವರು ಸರ್ವಸಮ್ಮತ ಜಮಾತ್‌ನಲ್ಲಿ ಅಂತಹ ಪ್ರಾಮಾಣಿಕತೆಯನ್ನು ಸೃಷ್ಟಿಸಿ ಮುನ್ನಡೆಯಬೇಕು." ಮತ್ತು ಇತರ ಮುಸ್ಲಿಮರಿಗೆ ಅಹ್ಮದಿಯಾ ಮುಸ್ಲಿಮ್ ಜಮಾಅತ್ ತಮ್ಮ ವಿಶ್ವಾಸಗಳನ್ನು ಜರಿಗೊಳಿಸುತ್ತಾರೆ ಎಂಬ ಭೀತಿ ಇದ್ದಲ್ಲಿ ಎಲ್ಲಾ ಮುಸ್ಲಿಮರು ಸೇರಿ, ಸರ್ವಾನುಮತದ ಜಮಾಅತ್ ಅನ್ನು ರಚಿಸಬೇಕು ಮತ್ತು ಪ್ರಾಮಾಣಿಕತೆಯನ್ನು ಬೆಳೆಸಿಕೊಂಡು ಮುಂದೆ ಸಾಗ ಬೇಕು ಮತ್ತು ಸತ್ತು (ಉರಿದಿರುವ ಧವಸಧಾನ್ಯಗಳ ಹಿಟ್ಟು) ಸೇವಿಸಬೇಕು ಮತ್ತು ಕಡಲೆಗಳನ್ನು ಜಗಿಯಬೇಕು ಮತ್ತು ಇಸ್ಲಾಮ್ ಧರ್ಮವನ್ನು ರಕ್ಷಿಸಬೇಕು. ನಾವು ಅಹ್ಮದಿಯರಲ್ಲಿ ಇಂತಹ ನಿಷ್ಠೆಯನ್ನು ನೋಡಿದ್ದೇವೆ. ಅವರು ಹೇಳುತ್ತಾರೆ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಸದಸ್ಯರ ಅಂತಹ ನಿಷ್ಠೆಯನ್ನು ನಾವು ನೋಡಿದ್ದೇವೆ. "ಒಬ್ಬರ ಇಮಾಮ್‌ಗೆ ಪ್ರಾಮಾಣಿಕತೆ, ಬದ್ಧತೆ, ವಿಧೇಯತೆ. ಹಾಗಾಗಿ ಈ ಜಮಾಅತ್ ಏಕೈಕ ಜಮಾಅತ್ ಆಗಿದೆ. ಮಿರ್ಝಾ ಸಾಹಿಬ್ ಮತ್ತು ಅವರ ಜಮಾಅತ್ತಿನ ಉನ್ನತ ನೈತಿಕತೆ ಮತ್ತು ಆತ್ಮ ತ್ಯಾಗವು ಮುಸ್ಲಿಮರನ್ನು ಅಂತಹ ಸ್ವಯಂ ತ್ಯಾಗಕ್ಕಾಗಿ ಪ್ರಶಂಸಿಸಿದೆ. "ಮುಸ್ಲಿಮರ ವಿಶಿಷ್ಟ ಗುಣಗಳಾಗಿದ್ದ ಪ್ರಾಮಾಣಿಕತೆ ಮತ್ತು ನಂಬಿಕೆ ಇಂದು ಅವರಲ್ಲಿ ಪ್ರಮುಖವಾಗಿದೆ. ಅಹ್ಮದಿಯಾ ಜಮಾಅತ್ ಅವರ ಉದಾರತೆ ಮತ್ತು ನಿಸ್ವಾರ್ಥತೆ ಮತ್ತು ಅವರ ಸಮಗ್ರತೆ ಮತ್ತು ನಿಖರತೆ ಮತ್ತು ಆದಾಯ ಮತ್ತು ವೆಚ್ಚದ ಲೆಕ್ಕಪತ್ರಗಳ ಕ್ರಮಬದ್ಧತೆ ಅತ್ಯಂತ ಶ್ಲಾಘನೀಯವಾಗಿದೆ ಮತ್ತು ಆದಾಯದ ಕೊರತೆಯ ನಡುವೆಯೂ ಈ ಜನರು ಉತ್ತಮ ಕೆಲಸಗಳನ್ನು ಮಾಡುತ್ತಿದ್ದಾರೆ.

(ಮಸೀಹ್ ಮೌಊದ್(ಅ) ಔರ್ ಜಮಾಅತ್ ಅಹ್ಮದಿಯಾ ಇನ್‌ಸಾಫ್ ಪಸಂದ್ ಅಸ್‌ಹಾಬ್ ಕಿ ನಝುರ್ ಮೇ, ಮೌಲ್ವಿ ಅಬ್ದುಲ್ ಮನನ್ ಶಾಹಿದ್, ಪುಟ 261, 262)

ಇದನ್ನು ಅನ್ಯರು ಒಪ್ಪಿಕೊಳ್ಳುತ್ತಿದ್ದಾರೆ. ಇದು ಅವರ ಮನದಾಳದ ನೋವಾಗಿತ್ತು, ಇದಕ್ಕಾಗಿ ಜಮಾಅತ್ ನಲ್ಲಿ ವಿಶೇಷ ಆಂದೋಲನವನ್ನು ಮಾಡಿ ಇಡೀ ಜಮಾಅತ್ ಅನ್ನು ಒಂದಲ್ಲ ಒಂದು ರೀತಿಯಲ್ಲಿ ಈ ಕಾರ್ಯಕ್ಕೆ ಸಜ್ಜುಗೊಳಿಸಿದರು, ಇದಕ್ಕಾಗಿ ಜಮಾಅತ್ ಅಲ್ಲದವರೂ ಗುರುತಿಸಿಕೊಂಡಿದ್ದಾರೆ.

ಮುಸ್ಲಿಹ್ ಮೌಊದ್(ರ) ನಿಧನಗೊಂಡಾಗ ಪ್ರಸಿದ್ಧ ಲೇಖಕ ಮತ್ತು ರಾಜಕರಣಿಯಾದ ಮಿಯಾ ಮುಹಮ್ಮದ್ ಶಫೀ ಹೀಗೆ ಬರೆದರು: ಮಿರ್ಝಾ ಮಹ್ಮೂದ್ ಅಹ್ಮದ್(ರ) ಖಿಲಾಫತಿನ ಸ್ಥಾನಕ್ಕೇರಿದ ನಂತರ ಯಾವ ರೀತಿಯಲ್ಲಿ ತನ್ನ ಜಮಾಅತನ್ನು ಸಂಘಟಿಸಿದರು ಮತ್ತು ಯಾವ ರೀತಿಯಲ್ಲಿ ಸದರ್ ಅಂಜುಮನ್ ಅಹ್ಮದಿಯಾವನ್ನು ಒಂದು ಸಕ್ರಿಯ ಮತ್ತು ಜೀವಂತ ಸಂಘಟನೆಯನ್ನಾಗಿ ಮಾಡಿದರೋ ಅದರಿಂದ ಅವರ ಅಪಾರವಾದ ಆಡಳಿತಾತ್ಮಕ ಶಕ್ತಿಯ ಬಗ್ಗೆ ಅರಿವಾಗುತ್ತದೆ. ಅವರ ಬಳಿ ಯಾವುದೇ ವಿಶ್ವವಿದ್ಯಾನಿಲಯದ ಡಿಗ್ರಿ ಇರಲಿಲ್ಲ. ಆದರೆ ಅವರು ವೈಯಕ್ತಿಕವಾಗಿ ಅಧ್ಯಯನ ನಡೆಸಿ ತನ್ನನ್ನು ನಿಜವಾಗಿಯೂ ವಿದ್ವಾಂಸರನ್ನಾಗಿ ಕರೆಯಲ್ಪಡಲು ಅರ್ಹರನ್ನಾಗಿ ಮಾಡಿದರು. ಮಿರ್ಝಾ ಸಾಹಿಬ್‌ರು ಅತ್ಯಂತ ಪ್ರಜ್ಞಾವಂತ ಮತ್ತು ನಿಪುಣ ಲೇಖಕರು ಆಗಿದ್ದರು ಮತ್ತು ಅವರು ಪ್ರತಿಯೊಂದು ಸಂದರ್ಭವನ್ನು ಅತ್ಯಂತ ಉಪಯುಕ್ತ ರೀತಿಯಲ್ಲಿ ಉಪಯೋಗಿಸುತ್ತಿದ್ದರು. ಅದರಿಂದ ಅವರ ಜಮಾಅತಿನ ಪ್ರಗತಿಯ ಮಾರ್ಗಗಳು ತೆರೆಯಲ್ಪಡುತ್ತಿದ್ದುವು. (ಅಲ್‌ಫಝುಲ್, 11-12-1965, ಪುಟ-5)

ನಂತರ The Light ಬೈಅತ್ ಮಾಡದವರ ವಕ್ತಾರರ ಪತ್ರಿಕೆ ಆಗಿದೆ. ಅವರು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ನಿಧನದ ಬಗ್ಗೆ ಬರೆದಿದ್ದಾರೆ. ಅದರ ಶೀರ್ಷಿಕೆ ಹೀಗಿತ್ತು. A Great Naton Builder (ಮಹಾನ್ ರಾಷ್ಟ್ರ ನಿರ್ಮಾತೃ) ಅವರು ನವೆಂಬರ್ 16, 1965 ರ ಸಂಚಿಕೆಯಲ್ಲಿ ಬರೆದಿದ್ದಾರೆ "ಇಮಾಮ್ ಜಮಾಅತೆ ಅಹ್ಮದಿಯಾ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಸಾಹಿಬ್ ಅವರ ನಿಧನವು ಘಟನೆಗಳಿಂದ ತುಂಬಿದ ಜೀವನದ ಅಂತ್ಯಕ್ಕೆ ಬಂದಿದೆ, ಇದು ದೂರಗಾಮಿ ಫಲಿತಾಂಶಗಳು, ಲೆಕ್ಕವಿಲ್ಲದಷ್ಟು ದೊಡ್ಡ ಸಾಧನೆಗಳು. ಯೋಜನೆಗಳು ಮತ್ತು ಪ್ರಚಾರಗಳಿಂದ ತುಂಬಿತ್ತು. ಅವರು ಮೇಧಾವಿ ಮತ್ತು ಕಲೆ ಮತ್ತು ವಿಜ್ಞಾನಗಳಲ್ಲಿ ಪ್ರಾಬಲ್ಯ ಹೊಂದಿದ್ದ ಮತ್ತು ಅಪಾರ ಶಕ್ತಿಯಿಂದ ತುಂಬಿದ ವ್ಯಕ್ತಿಯಾಗಿದ್ದರು. ಕಳೆದ ಅರ್ಧ ಶತಮಾನದಲ್ಲಿ, ಧಾರ್ಮಿಕ ಜ್ಞಾನ ಮತ್ತು ಅನುಗ್ರಹದಿಂದ ಇಸ್ಲಾಂ ಧರ್ಮದ ಪ್ರಚಾರ ಮತ್ತು ಪ್ರಸರಣದವರೆಗೆ ಮತ್ತು ಮೇಲಾಗಿ ರಾಜಕೀಯ ನಾಯಕತ್ವದವರೆಗೆ, ಆಲೋಚನೆ ಮತ್ತು ಆಚರಣೆಯಲ್ಲಿ ಯಾವುದೇ ಬದಲಾವಣೆ ಕಂಡುಬಂದಿಲ್ಲ. ಮೃತರು ತಮ್ಮ ವಿಶಿಷ್ಟ ಪ್ರಭಾವದ ಆಳವಾದ ಮುದ್ರೆಯನ್ನು ಬಿಡದ ಕ್ಷೇತ್ರವಿರುತ್ತದೆ. ಪ್ರಪಂಚದಾದ್ಯಂತ ಹರಡಿರುವ ಇಸ್ಲಾಮಿಕ್ ಮಿಷನ್‌ಗಳ ಜಾಲ, ಪ್ರಪಂಚದಾದ್ಯಂತ ನಿರ್ಮಿಸಲಾದ ಮಸೀದಿಗಳು ಮತ್ತು ಇಸ್ಲಾಂ ಧರ್ಮದ ಹರಡುವಿಕೆ ದೀರ್ಘಕಾಲ ಸ್ಥಾಪಿತವಾದ ಕ್ರಿಶ್ಚಿಯನ್ ಮಿಷನ್‌ಗಳನ್ನು ಬೇರುಸಹಿತ ಕಿತ್ತುಹಾಕುವುದು, ಆಫ್ರಿಕಾದಲ್ಲಿ ಇಸ್ಲಾಮಿನ ವಿಶಾಲ ಮತ್ತು

"ಉಪವಾಸ ಮಾಡಿರಿ, ಆರೋಗ್ಯ ಪಡೆಯಿರಿ."
"ಜನರಿಗೆ ಕೃತಜ್ಞತೆ ಸಲ್ಲಿಸದವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸಲಾರನು."
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
M.B. Nasir Ahmed & Family, Bengaluru, Karnataka

ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ. ಆದರೆ ಜನರು ಅದನ್ನು ಅರಿತಿಲ್ಲ.
(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

ದುಆವಿನ ಆಕಾಂಕ್ಷಿ:
Mubarak Ahmed Naseem & Family, Shimoga, Karnataka

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 04 April 2024, Issue No. 14

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ಆಳವಾದ ಪ್ರಭಾವ, ಇವುಗಳು ಮೃತರ ಮಹೋನ್ನತ ಸಾಧನೆಗಳು. ಶಾಶ್ವತ ಮತ್ತು ನಿರಂತರ ಸೃಜನಾತ್ಮಕ ಯೋಜನೆ, ಸಾಂಸ್ಥಿಕ ಸಾಮರ್ಥ್ಯ ಮತ್ತು ದಣಿವರಿಯದ ಹೋರಾಟದ ಸ್ಮಾರಕವಾಗಿದೆ. ಇತ್ತೀಚಿನ ದಿನಗಳಲ್ಲಿ ತನ್ನ ಅನುಯಾಯಿಗಳ ಅಂತಹ ಉತ್ಕಟ ಪ್ರೀತಿ ಮತ್ತು ಭಕ್ತಿಗೆ ಅರ್ಹನೆಂದು ಸಾಬೀತುಪಡಿಸಿದ ಯಾವುದೇ ಮಾನವ ನಾಯಕ ಇಲ್ಲ. ನಂತರ, ನಿಮ್ಮ ಅನುಯಾಯಿಗಳ ಉತ್ಕಟ ಪ್ರೀತಿ ಮತ್ತು ತ್ಯಾಗದ ಅಭಿವ್ಯಕ್ತಿ ಕೇವಲ ನಿಮ್ಮ ಜೀವನಕ್ಕೆ ಸೀಮಿತವಾಗಿಲ್ಲ, ಆದರೆ ಅದು ನಂತರವೂ ಅದೇ ತೀವ್ರತೆಯಿಂದ ವ್ಯಕ್ತವಾಗಿದೆ, ಆದರೆ ದೇಶದ ಎಲ್ಲಾ ಭಾಗಗಳಿಂದ ಅರವತ್ತು ಸಾವಿರ ಜನರು ತಮ್ಮ ಅಂತಿಮ ನಮನವನ್ನು ಸಲ್ಲಿಸಿದರು. ಇಮಾಮ್‌ರನ್ನು ಅಗಲಿದರು, ಅವರು ಗೌರವ ಸಲ್ಲಿಸಲು ಹುಚ್ಚರಾಗಿ ಓಡಿಹೋದರು. ಅಹಮದಿಯಾ ಜಮಾಅತ್‌ನ ಇತಿಹಾಸದಲ್ಲಿ, ಮಿರ್ಝಾ ಸಾಹಿಬ್ ಅವರ ಹೆಸರು ಸಮುದಾಯದ ಶ್ರೇಷ್ಠ ವಾಸ್ತುಶಿಲ್ಪಿಯಾಗಿ ಉಳಿಯುತ್ತದೆ, ಅವರು ತೀವ್ರ ತೊಂದರೆಗಳ ನಡುವೆಯೂ, ಒಗ್ಗಟ್ಟಿನ ಜಮಾಅತ್ ಅನ್ನು ಸ್ಥಾಪಿಸಿದರು ಮತ್ತು ಅದನ್ನು ನಿರ್ಲಕ್ಷಿಸಲಾಗದ ಶಕ್ತಿಯನ್ನಾಗಿ ಮಾಡಿದರು.

(ತಾರೀಖೆ ಅಹ್ಮದೀಯತ್, ಸಂಪುಟ–23, ಪುಟ–182)

ಭಿನ್ನಮತೀಯರ ಪತ್ರಿಕೆಯೂ ಅವರೊಬ್ಬ ಮಹಾನ್ ನಾಯಕ ಎಂಬುದನ್ನು ವ್ಯಕ್ತಪಡಿಸದೇ ಇರಲಾರದು. ಆದಾಗ್ಯೂ, ಇದು ಈ ಜನರ ಮುಕ್ತ ಹೃದಯದ ಅಭಿವ್ಯಕ್ತಿಯಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ವಿವಿಧ ವಿಷಯಗಳಲ್ಲಿ ಜಮಾಅತಿಗೆ ಮತ್ತು ಒಟ್ಟಾಗಿ ಮುಸ್ಲಿಮರಿಗೆ ಮಾರ್ಗದರ್ಶನ ನೀಡಿದ್ದರು. ಅವರ ಗ್ರಂಥಗಳು ಅನೇಕ ಬೃಹತ್ ಸಂಪುಟಗಳನ್ನು ಹೊಂದಿವೆ. ಅವರ ಖುತ್ಬಗಳು ಇವೆ. ಹಳೆಯ ರಿಕಾರ್ಡಿನಿಂದ ಪ್ರಕಾಶನಗೊಂಡಿರದ ನೋಟ್ಸ್ ಅಥವಾ ಖುತ್ಬಗಳಿಂದ ಮತ್ತು ಭಾಷಣಗಳಿಂದ ಪವಿತ್ರ ಖುರ್‌ಆನಿನ ವ್ಯಾಖ್ಯಾನಗಳು ಲಭಿಸುತ್ತಿವೆ. ಅವುಗಳನ್ನು ಸಹ ಪ್ರಕಟಿಸಲಾಗುವುದು – ಇನ್‌ಶಾ ಅಲ್ಲಾಹ್.

ಅನೇಕ ಪುಸ್ತಕಗಳು ಆಂಗ್ಲ ಭಾಷೆಯಲ್ಲೂ ಪ್ರಕಾಶನಗೊಂಡಿವೆ. ಉರ್ದು ಗೊತ್ತಿಲ್ಲದವರು ಆ ಅರಿವಿನ ಭಂಡಾರದಿಂದ ಪ್ರಯೋಜನ ಪಡೆಯಲು ಪ್ರಯತ್ನಿಸಬೇಕು. ಅಲ್ಲಾಹನು ನಮಗೆಲ್ಲರಿಗೂ ಆ ಜ್ಞಾನದ ಖಜಾನೆಯಿಂದ ಪ್ರಯೋಜನ ಪಡೆಯಲು ಸೌಭಾಗ್ಯ ನೀಡಲಿ.

ಇತ್ತೀಚೆಗೆ ಪಾಕಿಸ್ತಾನದಲ್ಲಿ ಜಮಾಅತಿನ ವಿರುದ್ಧ ವಿರೋಧದ ಅಲೆ ಪುನಃ ಎದ್ದಿದೆ. ಚುನಾವಣೆಯಲ್ಲಿ ಸೋತಿರುವ ಅಥವಾ ತಮ್ಮ ಇಷ್ಟ ಪ್ರಕಾರದ ಫಲಿತಾಂಶ ಲಭಿಸದ ರಾಜಕರಣಿಗಳ ಮತ್ತು ಮೌಲವಿಗಳ ಒಂದು ದೊಡ್ಡ ವಿಭಾಗ ಗಲಭೆ ಹರಡಲಿಕ್ಕಾಗಿ ಪುನಃ ಅಹ್ಮದಿಯರ ಮೇಲೆ ಹಲ್ಲೆ ನಡೆಸುತ್ತಿದೆ. ಆದ್ದರಿಂದ ಅಹ್ಮದಿಯರು ಜಾಗರೂಕರಾಗಿರುವುದರ ಜೊತೆಗೆ ದುಆಗಳನ್ನು ಮಾಡುವುದಕ್ಕೂ ಮತ್ತು ಸದಖಗಳನ್ನು ನೀಡುವುದಕ್ಕೂ ಬಹಳ ಹೆಚ್ಚು ಒತ್ತು ನೀಡಬೇಕಾಗಿದೆ. ಅಲ್ಲಾಹನು ಅಹ್ಮದಿಯರನ್ನು ಸಂರಕ್ಷಿಸಲಿ.

ಯಮನಿನ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರ ಕಷ್ಟತೆಗಳನ್ನು ನೀಗಿಸಲಿ. ಅವರಲ್ಲಿ ಅನೇಕರು ಸೆರೆಮನೆಯಲ್ಲಿ ಜೀವನವನ್ನು ಸಾಗಿಸುತ್ತಿದ್ದಾರೆ. ಅವರನ್ನು ಅಲ್ಲಾಹನು ಬೇಗನೇ ಸೆರೆಯಿಂದ ಬಿಡುಗಡೆಗೊಳಿಸಲಿ. ಫೆಲಸ್ತೀನಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರ ಮೇಲೂ ಕೃಪೆದೋರಲಿ ಮತ್ತು ಶಕ್ತಿಶಾಲಿ ದೇಶಗಳ ಪೀಡನೆಯಿಂದ ಅವರಿಗೆ ಮುಕ್ತಿ ನೀಡಲಿ.

ಘಾನದಲ್ಲಿ ಜಮಾಅತಿನ ಸ್ಥಾಪನೆಗೆ ನೂರು ವರ್ಷ ಪೂರ್ತಿಯಾಗಿದ್ದಕ್ಕಾಗಿ ಜರಗಿಸಲಾಗುವ ಶತಾಬ್ದಿ ಜಲ್ಸ ಸಾಲಾನದ ವಿಜಯಕ್ಕಾಗಿ ದುಆ ಮಾಡಿರಿ. ನಾಳೆ ಇಲ್ಲಿಂದ ಜಲ್ಸದಲ್ಲಿ ನನ್ನ ನೇರ ಪ್ರಸಾರ ಭಾಷಣವಿರುವುದು. ಅಲ್ಲಾಹನು ಎಲ್ಲ ರೀತಿಯಲ್ಲೂ ಅನುಗ್ರಹೀತಗೊಳಿಸಲಿ.

...*...*...*...

*ವಿಶೇಶ ಸೂಚನೆ* "ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಅ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

## ಆಡಂಬರ ಮತ್ತು ತೋರ್ಪಡಿಕೆಗೊಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಆಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ.

**(ಮಲ್‌ಫೂಝಾತ್, ಸಂಪುಟ-3, ಪುಟ–284)** (ರಿಶ್ತನಾತ ವಿಭಾಗ, **ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.